ಪ್ರವಾಸ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನನ್ಯತೆ

ಪಿಎಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ವಿನೋದ್ ರಾಜ್ ಸಿ. ಸಿ

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ,

ಮಂಗಳಗಂಗೋತ್ರಿ–೫೭೪೧೯೯

೨೦೨೧

ಪ್ರವಾಸ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನನ್ಯತೆ

ಅಧ್ಯಾಯ–೧: ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೨ ಅಧ್ಯಯನದ ಮಹತ್ವ

೧.೩ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧.೪ ಅಧ್ಯಯನದ ವಿಧಾನ ಕ್ರಮ

ಅಧ್ಯಾಯ–೨: ಪ್ರವಾಸ ಹಾಗೂ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ವ್ಯಾಪ್ತಿ

೧.೫ ಪ್ರವಾಸ ಪದದ ನಿಷ್ಪತ್ತಿ ಮತ್ತು ಅರ್ಥ

೧.೬ ಪ್ರವಾಸದ ವ್ಯಾಪ್ತಿ ಮತ್ತು ಉದ್ದೇಶ

೧.೭ ಪ್ರವಾಸದ ಬಗೆಗಿನ ಅಭಿಪ್ರಾಯಗಳು

೧.೮ ಪ್ರವಾಸದ ಸ್ವರೂಪ ಮತ್ತು ಮಾದರಿಗಳು

೧.೯ ಪ್ರವಾಸ ಸಾಹಿತ್ಯದ ಪರಿಕಲ್ಪನೆ

೧.೧೦ ಪ್ರವಾಸ ಸಾಹಿತ್ಯದ ಸ್ವರೂಪ

೧.೧೧ ಪ್ರವಾಸ ಸಾಹಿತ್ಯದ ಅನುಕೂಲತೆಗಳು

ಅಧ್ಯಾಯ–೩: ಪ್ರವಾಸ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆ

೩.೧ ಜಾಗತಿಕ ಪ್ರವಾಸ ಸಾಹಿತ್ಯ

೩.೨ ಭಾರತೀಯ ಪ್ರವಾಸ ಸಾಹಿತ್ಯ

೩.೩ ದ್ರಾವಿಡೇತರ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ

೩.೪ ದ್ರಾವಿಡ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ

ಅಧ್ಯಾಯ–೪: ಕನ್ನಡ ಪ್ರವಾಸ ಕಥನಗಳಲ್ಲಿ ಚಿತ್ರಣಗೊಂಡ ಭಾರತ

೪.೧ ಭಾರತ ಭೌಗೋಳಿಕ ವ್ಯಾಪ್ತಿಯ ಪ್ರವಾಸ ಕಥನಗಳು

೪.೧.೧ ಜಮ್ಮು ಕಾಶ್ಮೀರ

೪.೧.೨ ಉತ್ತರಾಖಂಡ್

೪.೧.೩ ದೆಹಲಿ

೪.೧.೪ ಪಂಜಾಬ್

೪.೧.೫ ಉತ್ತರ ಪ್ರದೇಶ

೪.೧.೬ ಬಿಹಾರ

೪.೧.೭ ಪಶ್ಚಿಮ ಬಂಗಾಳ

೪.೧.೮ ರಾಜಸ್ಥಾನ

೪.೧.೯ ಮಧ್ಯಪ್ರದೇಶ

೪.೧.೧೦ ಈಶಾನ್ಯ ರಾಜ್ಯಗಳು

೪.೧.೧೧ ಒರಿಸ್ಸಾ

೪.೧.೧೨ ಮಹಾರಾಷ್ಟ್ರ

೪.೧.೧೩ ಗೋವ

೪.೧.೧೪ ಕೇರಳ

೪.೧.೧೫ ತಮಿಳುನಾಡು

೪.೧.೧೬ ಕರ್ನಾಟಕ

೪.೧.೧೭ ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪ

ಅಧ್ಯಾಯ–೫: ವಿದೇಶಿ ಪ್ರವಾಸಿಗರ ಕಥನಗಳಲ್ಲಿ ಭಾರತ

೫.೧ ಕ್ರಿ.ಪೂ. ೫ ರಿಂದ ಕ್ರಿ.ಶ. ೧೩ನೇ ಶತಮಾನದ ಪ್ರವಾಸ ಕಥನಗಳು

೫.೨ ಕ್ರಿ.ಶ. ೧೩ ರಿಂದ ೧೫ನೇ ಶತಮಾನದ ಪ್ರವಾಸ ಕಥನಗಳು

೫.೩ ಕ್ರಿ.ಶ. ೧೫ ರಿಂದ ೧೭ನೇ ಶತಮಾನದ ಪ್ರವಾಸ ಕಥನಗಳು

ಅಧ್ಯಾಯ–೬: ಪ್ರವಾಸ ಸಾಹಿತ್ಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಘಟಕಗಳು

೬.೧ ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಹಿನ್ನೆಲೆಯಲ್ಲಿ

೬.೨ ಬ್ರಿಟೀಷರ ಕಾಲಾವಧಿಯಲ್ಲಿ ಭಾರತೀಯ ಸಮಾಜದಲ್ಲಾದ ಬದಲಾವಣೆಗಳು

೬.೩ ಮಾನವ ವಿಜ್ಞಾನದ ಶಿಸ್ತಿನಲ್ಲಿ ಸಾಂಸ್ಕೃತಿಕ ವಿಚಾರಗಳು

೬.೪ ಭಾರತೀಯ ಸಮಾಜದ ಮೇಲೆ ಪ್ರಭಾವ ಭೀರಿರುವ ವಿದೇಶಿ ಸಾಂಸ್ಕೃತಿಕ ಘಟಕಗಳು

೬.೫ ಪ್ರವಾಸ ಸಾಹಿತ್ಯದ ಸಾಹಿತ್ಯಕ ಮೌಲ್ಯ

- **ಸಮಾರೋಪ**
- **ಅನುಬಂಧಗಳು**

  ಪಾರಿಭಾಷಿಕ ಪದಗಳು

  ಆಕರ ಗ್ರಂಥಗಳು

  ಪರಾಮರ್ಶನ ಗ್ರಂಥಗಳು

  ಲೇಖನಗಳು

ಅಧ್ಯಾಯ ೧ : ಪ್ರಸ್ತಾವನೆ:

ದೇಶ ನೋಡು; ಕೋಶ ಓದು’ ಎಂಬ ಗಾದೆಯು ಪ್ರವಾಸವು ಜ್ಞಾನವನ್ನು ವಿಸ್ತರಿಸುವ ಅಂಶವಾಗಿ ಸ್ವೀಕರಿಸಿದೆ. ಇಲ್ಲಿ ಪ್ರವಾಸಕ್ಕೆ ನಮ್ಮ ಪೂರ್ವಜರಿತ್ತ ಮನ್ನಣೆ, ಪ್ರಾಮುಖ್ಯತೆಯನ್ನು ಗಮನಿಸಬಹುದು. ಜ್ಞಾನಾರ್ಜನೆಯ ಸಂದರ್ಭದಲ್ಲಿ ಕೋಶವನ್ನು ಓದುವುದರೊಂದಿಗೆ ದೇಶ ಪರ್ಯಟನೆಯೂ ಮುಖ್ಯವೆಂದು ಬಿಂಬಿತವಾಗಿದೆ.

ನೆರೆಕೆನ್ನೆಗೆ, ತೆರೆಗಲ್ಲಕೆ ಬಂದಡಸದ ಮುನ್ನ
ಕೀಳುಣಿಸಿದ ಏದುಸಿರಿನ, ಚಳಿ ಸೆಕೆಗಳ ಚಿಂತೆ
ಮನವನಲ್ಲಾಡಿಸದ ಮುನ್ನ,
ತಗುಣಿ ಸೊಳ್ಳೆ ಗುಂಪು ಗದ್ದಲಗಳ ಭೀತಿ
ರಕ್ತವನಾರಿಸದ ಮುನ್ನ,
ಮೈಯ ಕೆಚ್ಚು, ಕಾಲ ಕಸುವು, ಬಗೆಯ ಹುಮ್ಮಸ್ಸು
ಒಪ್ಪವಳಿಯದ ಮುನ್ನ,
ಮುಪ್ಪಿನ ಭಾರ ಹೆಗಲೇರದ ಮುನ್ನ,
ಕಿವಿಗೊಡು ಓ ಪ್ರೇಕ್ಷಣ ರಸಿಕನೆ, ಪ್ರವಾಸದ ಕರೆಗೆ.
ನೋಟಗಳು ಯೌವ್ವನದಲ್ಲಿ, ನೇವರಿಕೆ ಮುಪ್ಪಿನಲ್ಲಿ!

ಪ್ರವಾಸಕ್ಕೆ ಯೌವ್ವನದ ದಿನಗಳೇ ಯೋಗ್ಯವೆನ್ನುವ ಪ್ರೊ. ತೀ.ನಂ.ಶ್ರೀ. ಅವರು ಪ್ರವಾಸದ ಬಗೆಗಿನ ತಮ್ಮ ಅಭಿಪ್ರಾಯವನ್ನು [ಬಸವಣ್ಣನವರ ಪ್ರಸಿದ್ಧ ವಚನವನ್ನು ಬಳಸಿಕೊಂಡು] ತಾವೇ ಕಟ್ಟಿದ ಅಣಕವಾಡಿನಲ್ಲಿ ಚೆನ್ನಾಗಿ ಬಿಂಬಿಸಿದ್ದಾರೆ.

ಕನ್ನಡ ಪ್ರವಾಸ ಸಾಹಿತ್ಯವು ಒಂದು ವಿಶಿಷ್ಟವಾದ ಮತ್ತು ಪ್ರಮುಖವಾದ ಸಾಹಿತ್ಯ ಪ್ರಕಾರವಾಗಿದೆ. ಕಳೆದ ಶತಮಾನದ ಐದು ಮತ್ತು ಆರನೆಯ ದಶಕದವರೆಗೆ ವಿರಳವಾಗಿದ್ದ ಈ ಪ್ರಕಾರವು ಇಂದು ವೈವಿಧ್ಯಮಯವಾಗಿ ಬೆಳೆಯುತ್ತಿದೆ. ಕವಿಗಳು, ಕಾದಂಬರಿಕಾರರು, ವೈಚಾರಿಕ ಬರಹಗಾರರು ಮತ್ತು ಇತರ ಲೇಖಕರು ಪ್ರವಾಸ ಸಾಹಿತ್ಯ ರಚಿಸಿರುವುದರಿಂದ ಅವರವರ ರಂಗಗಳ ವಿಶಿಷ್ಟತೆಯು ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ಪಡಿಮೂಡಿದೆ. ಸಾಹಿತ್ಯದ ಈ ಪ್ರಕಾರವು ಇತರೆ ಪ್ರಕಾರಗಳಷ್ಟೇ ಆಕರ್ಷಣೀಯವೂ, ಸೃಜನಶೀಲವೂ ಆಗಿದೆ. ಹೀಗಿದ್ದರೂ ಕನ್ನಡ ಪ್ರವಾಸ ಸಾಹಿತ್ಯದ ಬಗ್ಗೆ ಗಂಭೀರವಾದ ಮತ್ತು ವಿಸ್ತೃತವಾದ ಅಧ್ಯಯನ ನಡೆದಿರುವುದು ತುಂಬಾ ಕಡಿಮೆ. ಕನ್ನಡ ಪ್ರವಾಸ ಸಾಹಿತ್ಯ ಕೇವಲ ಯಾವುದೋ ಒಂದು ಅಂಶಕ್ಕೆ ಅಥವಾ ಒಂದು ಸಮಾಜಕ್ಕೆ ಸೀಮಿತವಾಗದೆ ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ, ಚಾರಿತ್ರಿಕ, ರಾಜಕೀಯ ಹಾಗೂ ಇತರೆ ಅಂಶಗಳ ಕಡೆಗೂ ತನ್ನ ವ್ಯಾಪ್ತಿಯನ್ನು ಒಳಗೊಂಡಿದ್ದು, ಇದು ನೋಡುವ, ಕೇಳುವ, ಗ್ರಹಿಸುವ ಮೂಲಕ ಅನುಭವಕ್ಕೊಂದು ವ್ಯಾಪ್ತಿಯನ್ನು,

ಅರ್ಥವಂತಿಕೆಯನ್ನು ಮತ್ತು ಮೆರುಗನ್ನು ತಂದು ಕೊಡುವ ಮೂಲಕ ಹೆಚ್ಚಿನ ಅಧ್ಯಯನಕ್ಕೆ ವಿಷಯವನ್ನು ಒದಗಿಸುವ ಪ್ರಕಾರವಾಗಿ ಇಂದು ಪ್ರಾಮುಖ್ಯತೆ ಪಡೆಯುತ್ತಿದೆ.

ಪ್ರವಾಸ ಸಾಹಿತ್ಯವು ಕೇವಲ ಮನರಂಜನೆ ನೀಡುವುದಕ್ಕೆ ಮಾತ್ರ ಸೀಮಿತವಾಗದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಮೇಲೆ ಪ್ರಭಾವ ಬೀರಿ ಪರಿವರ್ತನೆಯನ್ನು, ಸುಧಾರಣೆಯನ್ನು ತರುವುದಲ್ಲದೆ ಮೌಢ್ಯವನ್ನು, ಅಂಧಾನುಕರಣೆಯನ್ನು ಬಯಲಿಗೆಳೆಯುತ್ತದೆ. ಪ್ರವಾಸ ಸಾಹಿತ್ಯವು ನ್ಯೂನ್ಯತೆಯನ್ನು ಗುರುತಿಸಿ ಮಾರ್ಗದರ್ಶಕವಾಗಿರುತ್ತದೆ. ಪ್ರವಾಸ ಕಥನಗಳು ದೇಶದ ಇತಿಹಾಸ ರಚನೆಗೆ, ಆಯಾ ಕಾಲದ ಆಚಾರ ವಿಚಾರಗಳನ್ನು ತಿಳಿಯುವುದಕ್ಕೆ ಸಹಾಯಕವಾಗಿವೆ. ಪ್ರವಾಸ ಪ್ರೇಮ ಎಲ್ಲಾ ದೇಶದ ಜನರಲ್ಲೂ ಇದೆ.

ಪ್ರಪಂಚದ ಎಲ್ಲಾ ಭಾಷೆಗಳಲ್ಲೂ ಪ್ರವಾಸ ಗ್ರಂಥಗಳು ರಚನೆಯಾಗಿವೆ. ಕ್ರಿ.ಪೂ., ಕ್ರಿ.ಶ.ಗಳಲ್ಲಿಯೂ ಪ್ರವಾಸ ಕಥನಗಳು ರಚನೆಯಾಗಿವೆಯೆಂದು ಉಲ್ಲೇಖವಿದೆ. ಗ್ರೀಕರು, ರೋಮನ್ನರು, ಫ್ರೆಂಚರು, ಯೂರೋಪಿಯನ್ನರು ಪ್ರವಾಸ ಗ್ರಂಥಗಳನ್ನು ರಚಿಸಿದ ಮಾಹಿತಿ ಇದೆ. ಇವೆಲ್ಲ ಪ್ರವಾಸ ಸಾಹಿತ್ಯದ ಸಮೃದ್ಧತೆಯನ್ನು ಸೂಚಿಸುತ್ತವೆ.

೧೮೯೦ ರಲ್ಲಿ ರಚಿತವಾದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ 'ದಕ್ಷಿಣ ಭಾರತ ಯಾತ್ರಾ' ಪ್ರವಾಸ ಕೃತಿ ಕನ್ನಡದ ಮೊದಲ ಕೃತಿಯಾಗಿದ್ದು, ಇದಕ್ಕೆ ೧೩೦ ವರ್ಷಗಳ ಇತಿಹಾಸವಿದೆ. ನಂತರ ೧೯೨೦ ರಲ್ಲಿ ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಹೊರಬಂದಿತು. ಅಲ್ಲಿಂದ ಮುಂದೆ ಪಾಶ್ಚಾತ್ಯ ಜಗತ್ತಿಗೆ ಕನ್ನಡ ಪ್ರವಾಸ ಸಾಹಿತ್ಯ ಕಾಲಿಟ್ಟಿತು. ಪ್ರವಾಸ ಕೇವಲ ತೀರ್ಥಯಾತ್ರೆಯಾಗಿ ಉಳಿಯದೆ ಹೊಸ ಜಗತ್ತಿನ ನೋಟ ನಿಲುವುಗಳಿಗೆ ತನ್ನನ್ನು ಒಡ್ಡಿಕೊಂಡಿತು. ಕರ್ನಾಟಕವನ್ನು ಕುರಿತು ಪ್ರವಾಸ ಸಾಹಿತ್ಯ, ಭಾರತವನ್ನು ಕುರಿತು ಪ್ರವಾಸ ಸಾಹಿತ್ಯ, ವಿದೇಶವನ್ನು ಕುರಿತು ಪ್ರವಾಸ ಸಾಹಿತ್ಯ ಮತ್ತು ಅನುವಾದ ಪ್ರವಾಸ ಸಾಹಿತ್ಯ ರಚನೆಯಾದ ಕಾರಣ ಪಾಶ್ಚಾತ್ಯ ಜಗತ್ತಿನ ಪ್ರವಾಸ ಸಾಹಿತ್ಯವನ್ನು ತುಲನಾತ್ಮಕವಾಗಿ ವಿವೇಚಿಸಬಹುದಾಗಿದೆ. ಸ್ವದೇಶದೊಳಗಿನ ಸಮಸ್ಯೆಗಳು, ಪ್ರಾಮಾಣಿಕತೆ, ವೈಜ್ಞಾನಿಕತೆ, ಸ್ವಚ್ಛಂದತೆ, ಶಿಸ್ತು ಇಂತಹ ಹಲವಾರು ವಿಚಾರಗಳು ಓದುಗರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುತ್ತವೆ.

ಆಧ್ಯಾತ್ಮ ಮತ್ತು ಧಾರ್ಮಿಕ ವಿಷಯಗಳ ತವರಾದ ಭಾರತೀಯರಿಗೆ ತೀರ್ಥಯಾತ್ರೆಯು ಮುಖ್ಯವಾಗಿದೆ. ಯಾತ್ರೆಯೆಂದರೆ ಕಾಶಿ ಯಿಂದ 'ರಾಮೇಶ್ವರ ದವರೆಗೆ' ಎಂಬ ಕಲ್ಪನೆಯಿದ್ದು ಇಡೀ ಸಮಗ್ರ ಭಾರತದ ದರ್ಶನವನ್ನು ಪ್ರಕಟಿಸುತ್ತದೆ. ಭಾರತದ ವಿವಿಧ ಪ್ರದೇಶದ ಜನಜೀವನ, ಆಹಾರಕ್ರಮ, ಸಾಂಸ್ಕೃತಿಕ ಬದುಕು, ಸಾಮಾಜಿಕ ಅಂಶಗಳಿಂದ ಪ್ರವಾಸಿಯು ತನ್ನ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕೆಂಬುದು ಮುಖ್ಯ ಉದ್ದೇಶ. ಕೇವಲ ಮೋಕ್ಷ ಸಂಪಾದನೆ ಅಥವಾ ಮನರಂಜನೆ ಅಲ್ಲ.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ರೀತಿಯಲ್ಲಿ ಪ್ರವಾಸ ಸಾಹಿತ್ಯವು ಒಳಗೊಳ್ಳದ ವಿಚಾರಗಳು ತುಂಬಾ ಕಡಿಮೆ. ಅತಿ ಕನಿಷ್ಟವೆನ್ನುವ ವಿಚಾರದಿಂದ ಅತ್ಯುಚ್ಚ ಅಂಶಗಳವರೆಗೆ ಎಲ್ಲವನ್ನು ದಾಖಲಿಸುವ, ಗಮನ ಸೆಳೆಯುವ

ಸಾಹಿತ್ಯ ಪ್ರಕಾರವಾಗಿದೆ. ಈ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ನಿರ್ಮಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಕನ್ನಡ ಪ್ರವಾಸ ಸಾಹಿತ್ಯದ ಬೆಳವಣಿಗೆಯಲ್ಲಿ ವಸಾಹತುಶಾಹಿಯ ಪ್ರಭಾವ ಮತ್ತು ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯನ್ನು ಕಾಣಬಹುದಾಗಿದೆ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಬಹಳವಾಗಿದ್ದರೂ ಈ ನೆಲದ್ದೇ ಆದ ಪ್ರತ್ಯೇಕ ಕಾರಣಗಳನ್ನು ಕಾಣಬಹುದು. ಪ್ರವಾಸ ಸಾಹಿತ್ಯದ ಉಗಮದ ಹಿಂದಿನ ಕಾರಣಗಳನ್ನು ಅರಿತುಕೊಳ್ಳುವುದು ಅತ್ಯಂತ ಅಗತ್ಯವಾದುದು. ಕನ್ನಡ ಪ್ರವಾಸ ಸಾಹಿತ್ಯ ಉಗಮಗೊಂಡಿರುವುದು ಧಾರ್ಮಿಕ ನೆಲೆಯಿಂದ ಅಂದರೆ ತೀರ್ಥಯಾತ್ರೆಗಳನ್ನು ನಡೆಸುವುದರ ಮುಖೇನ ಎನ್ನಬಹುದು. ಇದೇ ಅಂಶ ಭಾರತೀಯರಿಗೂ ಪಾಶ್ಚಾತ್ಯರಿಗೂ ಇರುವ ಪ್ರಮುಖ ಮೂಲಭೂತ ವ್ಯತ್ಯಾಸವನ್ನು ಎತ್ತಿ ತೋರಿಸುತ್ತದೆ. ಈ ಅರಿವು ಇಲ್ಲಿಯ ಪ್ರವಾಸ ಸಾಹಿತ್ಯದ ಅಧ್ಯಯನಕ್ಕೆ ತೀರಾ ಅಗತ್ಯವಾದ ವಿಚಾರವಾಗಿದೆ.

ಪ್ರವಾಸ ಸಾಹಿತ್ಯದ ಬಗ್ಗೆ ಗಂಭೀರವಾದ ಮತ್ತು ವಿಸ್ತೃತವಾದ ಅಧ್ಯಯನ ನಡೆದಿರುವುದು ತುಂಬಾ ಕಡಿಮೆ. ಸಾಹಿತ್ಯ ವಲಯಕ್ಕೆ ಈ ಪ್ರಕಾರದ ಪರಿಚಯವಾಗಿರುವುದು ಕೇವಲ ಮೇಲ್ಪದರದಲ್ಲಿ ಮಾತ್ರ. ಕನ್ನಡ ಪ್ರವಾಸ ಸಾಹಿತ್ಯ ಪ್ರತ್ಯೇಕ ಪ್ರಕಾರವಾಗಿ ಉಗಮಗೊಂಡು ಇಂದಿಗೆ ಸುಮಾರು ಒಂದು ಕಾಲು ಶತಮಾನವೇ ಕಳೆದಿದೆ. ಈ ಕಾಲಾವಧಿಯಲ್ಲಿ ಪ್ರವಾಸ ಸಾಹಿತ್ಯ ಪ್ರಕಾರದ ಬೆಳವಣಿಗೆ ಮತ್ತು ವೈವಿಧ್ಯಮಯ ಕೃತಿಗಳ ಅಧ್ಯಯನ ಇನ್ನಾದರೂ ಆಗಬೇಕಾಗಿರುವ ವಿಚಾರವಾಗಿದೆ. ಹಂತ ಹಂತವಾಗಿ ಬೆಳೆದು ಬಂದಿರುವ ಈ ಪ್ರಕಾರದ ಒಂದೊಂದು ಅವಸ್ಥೆಯನ್ನು ಕೂಲಂಕಷವಾದ ಅಧ್ಯಯನದಿಂದ ಪರಾಮರ್ಶಿಸಬೇಕಾಗಿದೆ. ಪ್ರವಾಸ ಸಾಹಿತ್ಯ ಕುರಿತಾಗಿ ಪ್ರಸ್ತುತ ವಿದೇಶಿ ಪ್ರವಾಸ ಕಥನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಅಲ್ಲಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಿಚಾರಗಳನ್ನು ಕುರಿತಂತೆ ಅಧ್ಯಯನ ನಡೆದಿದೆ. ಆದರೆ ಸಮಗ್ರ ಭಾರತದ ಸಂಸ್ಕೃತಿ ಯನ್ನು ಪ್ರತಿಬಿಂಬಿಸುವಂತಹ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಈ ಅಧ್ಯಯನವು ವಿವಿಧ ಕಾಲಘಟ್ಟಗಳಲ್ಲಿ, ವಿವಿಧ ದೃಷ್ಟಿಕೋನಗಳಿಂದ ಸಮಗ್ರವಾಗಿ ಭಾರತದ ಸಮಾಜ ಹಾಗೂ ಸಂಸ್ಕೃತಿಯನ್ನು ಪುನನಿರ್ಮಿಸುವುದನ್ನು ಈ ಅಧ್ಯಯನ ಒಳಗೊಂಡಿದೆ.

ಈ ಪ್ರಕಾರವನ್ನು ವಿಸ್ತೃತವಾಗಿ ಅಧ್ಯಯನ ಮಾಡದೆ ಕೇವಲ ಒಂದೆರಡು ಕೃತಿಗಳ ಪರಿಚಯದಿಂದ ಇಡೀ ಒಂದು ಸಾಹಿತ್ಯ ಪ್ರಕಾರವನ್ನೇ ಕುರಿತು ವ್ಯಾಖ್ಯಾನಿಸುವುದು, ಬೆಳವಣಿಗೆಯ ಬಗೆಗೆ ಖಚಿತ ಮತ್ತು ದೃಢ ನಿಲುವಿಗೆ ಬಂದು ಬಿಡುವುದು ಈ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಆಳವಾದ ಅಧ್ಯಯನದ ಕೊರತೆಯಿಂದ ಎನ್ನಬಹುದು. ಆ ನಿಟ್ಟಿನಲ್ಲಿ ಈ ಅಧ್ಯಯನ ಪ್ರಮುಖವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಪ್ರವಾಸದ ಮೂಲ ಕಾರಣಗಳ ಬಗೆಗಿನ ಇದುವರೆಗಿನ ತಿಳುವಳಿಕೆಯನ್ನು ಪುನರ್ ಪರಿಶೀಲಿಸಲಾಗುತ್ತದೆ. ಪ್ರವಾಸದ ಬಗೆಗಿರುವ ಇಂದಿನ ನಾಗರಿಕ

ಸಮಾಜದ ಅರ್ಥಗಳನ್ನು ಪರಿಶೀಲನೆಗೆ ಒಳಪಡಿಸುವ ಮತ್ತು ಪ್ರವಾಸದ ವಾಸ್ತವ ಕಾರಣಗಳನ್ನು ಹುಡುಕುವ ಕಡೆಗೆ ಗಮನ ಕೊಡಲಾಗುವುದು. ಮಾನವ – ಪ್ರವಾಸ – ಪ್ರವಾಸ ಸಾಹಿತ್ಯ ಇವುಗಳ ಪರಸ್ಪರ ಸಂಬಂಧ, ಅನನ್ಯತೆ ಮತ್ತು ಅಗತ್ಯತೆಗಳನ್ನು ಶೋಧಿಸುವ ಕಾರ್ಯವಾಗಿದೆ. ಈ ಮಹಾಪ್ರಬಂಧದ ಅಧ್ಯಯನದಲ್ಲಿ ಪ್ರವಾಸ ಸಾಹಿತ್ಯದ ಸ್ವರೂಪ, ಲಕ್ಷಣ ಮತ್ತು ವ್ಯಾಪ್ತಿಯನ್ನು ಭಾರತೀಯವಷ್ಟೇ ಅಲ್ಲದೆ ಜಾಗತಿಕ ಪ್ರವಾಸ ಸಾಹಿತ್ಯದ ಹಿನ್ನೆಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತದೆ. ಭಾರತೀಯ ಸಾಹಿತ್ಯದಲ್ಲಿ ಈ ಪ್ರಕಾರದ ಬೆಳವಣಿಗೆ ಮತ್ತು ದ್ರಾವಿಡ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯವು ಪ್ರಕಾರವಾಗಿ ಬೆಳೆದು ಬಂದಿರುವ ಹಿನ್ನೆಲೆಯನ್ನು ಮತ್ತು ಪಡೆದುಕೊಂಡಿರುವ ಸಾರ್ಥಕತೆಯನ್ನು ಗುರುತಿಸುವ ವ್ಯಾಪ್ತಿಯನ್ನು ಈ ಅಧ್ಯಯನವು ಒಳಗೊಡಿದೆ.

ಪ್ರವಾಸ ಸಾಹಿತ್ಯವು ಸಮಾಜ ವಿಜ್ಞಾನಕ್ಕೆ ಮತ್ತು ಮಾನವ ವಿಜ್ಞಾನಕ್ಕೆ ಹಲವು ವಿಧದಲ್ಲಿ ಪ್ರಯೋಜನಕಾರಿಯಾದ ವಿಚಾರಗಳನ್ನು ಒದಗಿಸುತ್ತದೆ. ಇದು ಸಮಗ್ರವಾಗಿ ಸಾಮಾಜಿಕ ರಚನೆಯನ್ನು ಮತ್ತು ಅವುಗಳಲ್ಲಿನ ಗುಣದೋಷಗಳನ್ನು ಯಥಾವತ್ತಾಗಿ ಚಿತ್ರಿಸುವ ಕೈಗನ್ನಡಿಯಾಗಿ ಪ್ರತಿಬಿಂಬಿಸುತ್ತದೆ. ಅಂತೆಯೇ ಸಾಮಾಜಿಕ ಜಾಡ್ಯಗಳನ್ನು ನಿವಾರಿಸುವಲ್ಲಿ ಸಕ್ರಿಯ ಪಾತ್ರವಹಿಸುತ್ತದೆ. ಯಾವುದೇ ಸಮಾಜದಲ್ಲಿನ ಉತ್ತಮ ವಿಚಾರಗಳನ್ನು ಗ್ರಹಿಸುವುದರ ಜೊತೆಗೆ ದೋಷಗಳನ್ನು ಬಹಿರಂಗಗೊಳಿಸುವುದರ ಮೂಲಕ ಸಾಮಾಜಿಕ ಪರಿವರ್ತನೆಗೆ ಸಹಕರಿಸುತ್ತದೆ. ಕನ್ನಡದಲ್ಲಿ ಪ್ರಕಟವಾಗಿರುವ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ ಮಾತ್ರವಲ್ಲದೆ ಕ್ರಿ.ಪೂ.ದಿಂದಲೂ ಹಲವಾರು ವಿದೇಶಿಯ ಪ್ರವಾಸಿಗರು ಭಾರತಕ್ಕೆ ಬಂದು ಇಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವನ್ನು ಕಣ್ಣಾರೆ ಕಂಡು ತಮ್ಮ ಪ್ರವಾಸದ ಅನುಭವಗಳಲ್ಲಿ ದಾಖಲಿಸಿದ್ದಾರೆ. ಈ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ ಸಮೀಕ್ಷಿಸುವುದು ಅಧ್ಯಯನದ ಉದ್ದೇಶವಾಗಿದೆ.

ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದ ಬಿಡಿ ಲೇಖನಗಳು, ಪ್ರವಾಸ ಕಥನಗಳು ಸಮಗ್ರ ಹಾಗೂ ಸವಿಸ್ತಾರ ಅಧ್ಯಯನಕ್ಕೆ ಸಾಮಗ್ರಿಯಾಗಿವೆ. ಇವು ಸಮಾಜದ ಏಳುಬೀಳುಗಳನ್ನು ಚಿತ್ರಿಸುವುದರ ಜೊತೆಗೆ ಭವಿಷ್ಯದ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಪ್ರೋತ್ಸಾಹ ನೀಡುತ್ತವೆ. ಇವುಗಳಲ್ಲಿ ಕೆಲವು ತಪ್ಪು ಕಲ್ಪನೆಗಳು ನುಸುಳಿರಬಹುದು, ಅತಿರೇಕಗಳು ಕಾಣಿಸಬಹುದು. ಆದರೆ ಆಯಾ ಕಾಲಘಟ್ಟಗಳಲ್ಲಿ ಕಂಡ ಭಾರತದ ನೈಜ ಚಿತ್ರಣ ಮೈದೋರಿರುತ್ತದೆ. ಉತ್ತಮವಾದ ಪ್ರವಾಸ ಕಥನಗಳು ಸಾಹಿತ್ಯದ ಅಮೂಲ್ಯ ಆಸ್ತಿಗಳು. ಇವುಗಳೆಲ್ಲದರ ಕ್ರೋಢಿಕೃತವಾದ, ಗಂಭೀರವಾದ ಮತ್ತು ಆಳವಾದ ಅಧ್ಯಯನದ ಮೂಲಕ ಅನನ್ಯ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ಪುನರ್ನಿರ್ಮಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೧.೩ ಇದುವರೆಗೆ ನಡೆದಿರುವ ಅಧ್ಯಯನಗಳು:

ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಪಾದಿಸಿರುವ 'ಪ್ರವಾಸ ಸಾಹಿತ್ಯ ಅಧ್ಯಯನ' (೧೯೯೨) ಎಂಬ ಕೃತಿಯು ಪ್ರವಾಸ ಸಾಹಿತ್ಯ ಕುರಿತ ಹಲವು ಸಾಹಿತಿಗಳ ಲೇಖನಗಳ ಗುಚ್ಛವಾಗಿದೆ. ಇದರಲ್ಲಿ ಪ್ರವಾಸ ಸಾಹಿತ್ಯದ ಲಕ್ಷಣ, ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ಚರ್ಚೆ ನಡೆಸಲಾಗಿದ್ದು ಒಂದು ಪ್ರಮುಖ ಕೃತಿಯಾಗಿದೆ.

ಡಾ. ಎಸ್. ವಿದ್ಯಾಶಂಕರ ಅವರ ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ' (೧೯೯೧) ಎಂಬ ಗ್ರಂಥದಲ್ಲಿ ಪ್ರವಾಸೋದ್ಯಮದ ಬಗ್ಗೆ ಹಾಗೂ ಒಂದು ಶತಮಾನಕ್ಕೂ ಹೆಚ್ಚು ಇತಿಹಾಸ ಹೊಂದಿರುವ ಕನ್ನಡ ಪ್ರವಾಸ ಸಾಹಿತ್ಯದ ಬಗ್ಗೆ ವಿವರಿಸಿದ್ದಾರೆ. ಈ ಕೃತಿಯಲ್ಲಿ ಪ್ರಮುಖ ಪ್ರವಾಸ ಕಥನಗಳನ್ನು ವಿಶ್ಲೇಷಿಸುವ ಮೂಲಕ ಸಮಗ್ರವಾಗಿ ವಿವೇಚಿಸಿರುವ ಮೊದಲ ಕೃತಿಯಾಗಿದೆ.

ಡಾ.ಎಂ. ಆರ್ಮುಗಂ ಅವರ ಪ್ರವಾಸ ಸಾಹಿತ್ಯ: ಒಂದು ಅಧ್ಯಯನ' (೧೯೯೨) ಎಂಬ ಅಪ್ರಕಟಿತ ಮಹಾಪ್ರಬಂಧವು ಕನ್ನಡ ಪ್ರವಾಸ ಸಾಹಿತ್ಯ ಕುರಿತ ಮೊದಲ ಪಿಎಚ್.ಡಿ. ಮಹಾಪ್ರಬಂಧವಾಗಿದೆ. ಇದರಲ್ಲಿ ಪ್ರವಾಸ ಸಾಹಿತ್ಯವನ್ನು ಸಮಗ್ರವಾಗಿ ಎಲ್ಲಾ ದೃಷ್ಟಿಕೋನಗಳಿಂದ ನೋಡಲಾಗಿದ್ದು ಮುಂದಿನ ಅಧ್ಯಯನಗಳಿಗೆ ಮಾರ್ಗದರ್ಶಿಯಾಗಿದೆ.

ಲತಾ ಎಂ. ಗುತ್ತಿ ಪಾಟೀಲ ಅವರ ಪ್ರವಾಸ ಸಾಹಿತ್ಯ–ಅನ್ಯ ಸಂಸ್ಕೃತಿಗಳ ಅಧ್ಯಯನ (೨೦೦೫) ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಪ್ರವಾಸ ಸಾಹಿತ್ಯದಲ್ಲಿ ಮೂಡಿಬಂದಿರುವ ವಿಶ್ವದ ವಿವಿಧ ಖಂಡಗಳ ಸಾಂಸ್ಕೃತಿಕ ಅಂಶಗಳ ವಿಶ್ಲೇಷಣೆ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಹೆಚ್.ಎಲ್.ನಾಗೇಗೌಡ ಅವರ 'ಪ್ರವಾಸಿ ಕಂಡ ಇಂಡಿಯಾ' (೧೯೬೪) ಸಂಪುಟಗಳಲ್ಲಿ ಕ್ರಿ.ಪೂ.ದಿಂದಲೂ ಹಲವಾರು ವಿದೇಶಿ ಪ್ರವಾಸಿಗರು ಭಾರತಕ್ಕೆ ಬಂದು ಇಲ್ಲಿಯ ಪ್ರವಾಸದ ಅನುಭವಗಳನ್ನು ಕುರಿತು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ವಿಚಾರಗಳನ್ನು ದಾಖಲಿಸಿದ್ದಾರೆ. ಇವು ನಮ್ಮ ಸಂಸ್ಕೃತಿಯನ್ನು ಪುನರ್ನಿರ್ಮಿಸಲು ಐತಿಹಾಸಿಕ ದಾಖಲ

ಡಾ.ಎಂ.ಆರ್ಮುಗಂ ಅವರು ಪ್ರವಾಸ ಸಾಹಿತ್ಯ ಬೆಳೆದು ಬಂದ ದಾರಿ (೧೯೮೯) ಎಂಬ ಲೇಖನವು ಪ್ರವಾಸ ಸಾಹಿತ್ಯದ ಇತಿಹಾಸ, ಸ್ವರೂಪ, ವ್ಯಾಪ್ತಿ, ಬಗೆಗಳು ಹಾಗೂ ಪ್ರವಾಸದ ಬಗೆಗಳ ಬಗ್ಗೆ ವಿಶ್ಲೇಷಣೆ ಮಾಡಿರುವ ಪರಿಚಯಾತ್ಮಕ ಲೇಖನವಾಗಿದೆ.

ಡಾ.ಎಂ.ಆರ್ಮುಗಂ ಅವರು ಪ್ರವಾಸ ಸಾಹಿತ್ಯ: ಒಂದು ವಿಶ್ಲೇಷಣೆ' ಎಂಬ ಲೇಖನದಲ್ಲಿ ಕೆಲವು ಲೇಖಕರ ಪ್ರವಾಸ ಸಾಹಿತ್ಯ ಕುರಿತ ಲೇಖನಗಳ ಹಿನ್ನೆಲೆಯಲ್ಲಿ ಪ್ರವಾಸ ಸಾಹಿತ್ಯದ ಅಧ್ಯಯನ, ವ್ಯಾಪ್ತಿ, ಸ್ವರೂಪ, ಲಕ್ಷಣ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ.

ಡಾ.ಸೀತಾ ಹನಸೋಗೆ ಅವರು ಪ್ರವಾಸ ಮತ್ತು ಕ್ರೀಡೆ (೨೦೦೪) ಎಂಬ ಲೇಖನದಲ್ಲಿ ಪ್ರವಾಸ ಸಾಹಿತ್ಯದ ಇತಿಹಾಸ ಹಾಗೂ ವಿಧಗಳನ್ನು ವಿಶ್ಲೇಷಿಸಿದ್ದಾರೆ. ಪ್ರಮುಖವಾಗಿ ಮಹಿಳೆಯರ ದೇಶಿಯ ಹಾಗೂ ವಿದೇಶಿಯ ಪ್ರವಾಸ ಕಥನಗಳನ್ನು ಕುರಿತು ಚರ್ಚಿಸಿದ್ದಾರೆ.

ಸಾ.ಶಿ. ಮರುಳಯ್ಯ ಅವರು ಕನ್ನಡ ನುಡಿ (೧೯೬೩) ಪತ್ರಿಕೆಯಲ್ಲಿ ಪ್ರವಾಸ ಸಾಹಿತ್ಯ' ಕುರಿತ ಲೇಖನದಲ್ಲಿ ಆರನೆಯ ದಶಕದವರೆಗೆ ಪ್ರಕಟವಾಗಿರುವ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ ಪ್ರವಾಸ ಸಾಹಿತ್ಯದ ಇತಿಹಾಸ, ಸ್ವರೂಪ ಹಾಗೂ ಪ್ರವಾಸ ಸಾಹಿತ್ಯದ ವಿಧಗಳನ್ನು ವಿಶ್ಲೇಷಿಸಿದ್ದಾರೆ.

ಡಾ.ಎನ್.ಎಸ್. ತಾರಾನಾಥ ಅವರ ಪ್ರವಾಸ ಸಾಹಿತ್ಯ' (೧೯೯೨) ಎಂಬ ಲೇಖನವು ಪ್ರವಾಸ ಸಾಹಿತ್ಯದಲ್ಲಿ ಒಂದು ಪ್ರಮುಖವಾದ ಲೇಖನವಾಗಿದೆ. ಇದರಲ್ಲಿ ಪ್ರವಾಸ ಸಾಹಿತ್ಯದ ಸ್ವರೂಪ, ಲಕ್ಷಣ, ವ್ಯಾಪ್ತಿ ಹಾಗೂ ಪ್ರವಾಸ ಸಾಹಿತ್ಯ ಸೃಜನಶೀಲವೋ ಅಥವಾ ಸೃಜನಶೀಲವಲ್ಲವೋ ಎಂಬುದಾಗಿ ಚರ್ಚೆ ನಡೆಸಿದ್ದಾರೆ.

೧.೪ ಅಧ್ಯಯನದ ವಿಧಾನ ಕ್ರಮ :

ಪ್ರಸ್ತುತ ಅಧ್ಯಯನಕ್ಕೆ ಮುಖ್ಯವಾಗಿ ಸಾಮಗ್ರಿ ಆಗುವಂತಹ ಪ್ರಕಟಿತ ಪ್ರವಾಸ ಕಥನಗಳನ್ನು ಸಂಗ್ರಹಿಸಿ, ಸಂಗ್ರಹಿತ ಸಾಮಗ್ರಿಗಳು ಹೊರಸೂಸುವ ಅರ್ಥದ ಆಧಾರದ ಮೇಲೆ ಐತಿಹಾಸಿಕ, ಸಾಮಾಜಿಕ ಸಂಶೋಧನೆಯನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ. ಒಂದು ಯುಗದ ಸಾಹಿತ್ಯವು ಆ ಯುಗದ ಪರಂಪರೆಯ ಫಲವೆನ್ನುವಂತೆ ಮೂಡಿ ಬಂದಿರುತ್ತದೆ. ಆದ್ದರಿಂದ ಆ ಕೃತಿಗಳ ಅಧ್ಯಯನದಿಂದ ಸಾಹಿತ್ಯ ವಿಕಾಸದ ಸೋಪಾನಗಳು ಗೋಚರವಾಗುವುದರ ಜೊತೆಗೆ ಆ ಕಾಲದ ಜನಜೀವನವನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಒಂದು ರೀತಿಯ ಸಾಹಿತ್ಯ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ. ಆ ಬದಲಾವಣೆಯನ್ನು ಅಭ್ಯಸಿಸುವುದು ಚರಿತ್ರೆ, ವರ್ತಮಾನವು ಭೂತಕ್ಕೆ ಋಣಿಯಾಗಿರುತ್ತದೆ. ಸಾಮಾಜಿಕ ಸಂಶೋಧನಾ ವಿಧಾನದಲ್ಲಿ ಆಯಾ ಕಾಲದಲ್ಲಿನ ಜನರ ನಡೆ–ನುಡಿ, ರೀತಿ–ನೀತಿ, ಆಚಾರ–ವಿಚಾರ ಜೀವನ ಮೌಲ್ಯಗಳು ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲು ಕೂಡ ವಿವಿಧ ಕಾಲಘಟ್ಟಗಳಲ್ಲಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವುದರಿಂದ ಪ್ರಮುಖವಾಗಿ ಐತಿಹಾಸಿಕ ಹಾಗೂ ಸಾಮಾಜಿಕ ಸಂಶೋಧನಾ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ವಿವಿಧ ಕಾಲಘಟ್ಟದಲ್ಲಿ ಹಾಗೂ ವಿಭಿನ್ನ ದೃಷ್ಟಿಕೋನದಲ್ಲಿ ರಚನೆಯಾದ ಪ್ರವಾಸ ಕಥನಗಳನ್ನು ವಿಶ್ಲೇಷಣೆ ಹಾಗೂ ಸಮೀಕ್ಷೆ ವಿಧಾನಕ್ಕೂ ಕೂಡ ಅನ್ವಯಿಸಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಸಾಮಾಜಿಕ ಮತ್ತು ಐತಿಹಾಸಿಕ ವಿಧಾನಗಳ ಜೊತೆಗೆ ವಿಶ್ಲೇಷಣಾಮುಖಿ ಹಾಗೂ ಸಮೀಕ್ಷಾ ವಿಧಾನವನ್ನು ಕೂಡ ಬಳಸಿಕೊಳ್ಳಲಾಗಿದೆ. ಗತಿಸಿ ಹೋದದ್ದನ್ನು ಆಯಾ ಕಾಲದಲ್ಲಿ ನಿಂತು ನೋಡುವುದು ಸಾಮಾಜಿಕ ಅಧ್ಯಯನವಾದರೆ, ಅದನ್ನೊಂದು ಗತಕಾಲದ ವಿಷಯವೆನ್ನುವಂತೆ ನೋಡುವುದು

ಐತಿಹಾಸಿಕ ಸಂಶೋಧನೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸ ಕಥನಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ.

ಅಧ್ಯಾಯ–೨ ಪ್ರವಾಸ ಹಾಗೂ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ವ್ಯಾಪ್ತಿ

ಪ್ರವಾಸ ಎಂಬ ಪದ ಕೇವಲ ಮನರಂಜನೆಗಾಗಿ ಅಥವಾ ಸ್ಥಳ ಬದಲಾವಣೆಗಾಗಿ ಏರ್ಪಡಿಸಿಕೊಂಡ ಒಂದು ಪರ್ಯಾಯ ವ್ಯವಸ್ಥೆ ಎಂಬ ಸೀಮಿತವಾದ ಅರ್ಥದಲ್ಲಿ ಇದುವರೆಗೆ ಬಳಕೆಯಾಗುತ್ತಿದೆ. ಪ್ರವಾಸವೆಂದರೇನು ಎಂಬುದನ್ನು ಕೆಲವೇ ಪದಗಳಲ್ಲಿ ಸರಳವಾಗಿ ವ್ಯಾಖ್ಯಾನ ಮಾಡುವುದು ಕಷ್ಟ. ಪ್ರವಾಸವೆಂಬುದು ಹಲವು ಕಾರಣಗಳಿಂದ ಉಂಟಾಗುವ ಕ್ರಿಯೆ. ವ್ಯವಸ್ಥಿತ ಸಮಾಜದ ಮಾನವನಿಗೆ ಒಂದು ಶಾಶ್ವತವಾದ ನೆಲೆಯಿದ್ದು ಯಾವುದೋ ಒಂದು ಉದ್ದೇಶದಿಂದ ತಾತ್ಕಾಲಿಕವಾಗಿ ಪ್ರಯಾಣ ಮಾಧ್ಯಮದ ಮೂಲಕ ಆ ನೆಲೆಯು ಬದಲಾದಾಗ ಅಥವಾ ಸ್ಥಳಾಂತರವಾದಾಗ ಪ್ರವಾಸ ಹುಟ್ಟಿಕೊಳ್ಳುತ್ತದೆ. ಮಾನವ ಜೀವನದ ಪರಸ್ಥಳದ ಬದುಕಿನ ಹಿನ್ನೆಲೆಯಲ್ಲಿ ಪ್ರವಾಸದ ಕಾಲಾವಧಿಯನ್ನು ಗುರುತಿಸಿಕೊಳ್ಳಬಹುದು. ಈ ಸ್ಥಳಾಂತರದ ಕ್ರಿಯೆಯು ಜೀವನ ಪರ್ಯಂತದ ಖಾಯಂ ವಾಸವಾಗದೇ ಕೆಲವು ಗಂಟೆಗಳ, ಕೆಲವು ದಿವಸಗಳ, ಕೆಲವು ತಿಂಗಳುಗಳು ಅಥವಾ ಕೆಲವು ವರ್ಷಗಳ ಅನ್ಯ ಪ್ರದೇಶದ ವಾಸವಾಗಿರಬಹುದು. ಪ್ರವಾಸದ ಮಾಸದ ಕಾಲಾವಧಿಯ ಬಗ್ಗೆ ಕನಿಷ್ಠ ಅಥವಾ ಗರಿಷ್ಠ ಮಿತಿಯನ್ನೊಡ್ಡಲು ಸಾಧ್ಯವಿಲ್ಲ. ಅಂತೆಯೇ ಇಂತಹುದೇ ಸ್ಥಳವಾಗಿರಬೇಕೆಂಬ ನಿರ್ಬಂಧವನ್ನು ಪ್ರವಾಸದ ಮೇಲೆ ಹೇರುವುದು ಕಷ್ಟ. ಆದರೆ ಈ ತಾತ್ಕಾಲಿಕ ವಾಸವು ತನ್ನ ಸಮಾಜ ಸಂಸ್ಕೃತಿ ಮತ್ತು ಭೌಗೋಳಿಕ ಪರಿಸರಕ್ಕಿಂತ ಭಿನ್ನವಾಗಿದ್ದಲ್ಲಿ ಪ್ರವಾಸ ಔಚಿತ್ಯಪೂರ್ಣವೂ, ಅರ್ಥಪೂರ್ಣವೂ ಆಗಿ ಉಪಯುಕ್ತವಾಗುತ್ತದೆ. ಪರಸ್ಥಳ ವಾಸದ ಅವಧಿಯಲ್ಲಿ ಪ್ರವಾಸಿಯ ದೈನಂದಿನ ವ್ಯವಹಾರಗಳಲ್ಲಿ ನಡೆಯುವ ಘಟನೆಗಳೇ ಪ್ರವಾಸಾನುಭವಗಳಾಗಿ ಪ್ರವಾಸ ಸಾಹಿತ್ಯದಲ್ಲಿ ನಿರೂಪಿತವಾಗುತ್ತವೆ.

೨.೧ ಪ್ರವಾಸದ ಅರ್ಥ:

ಕನ್ನಡದಲ್ಲಿ ಪ್ರವಾಸ ಎಂಬ ಪದವನ್ನು ಹಲವು ರೀತಿಯಲ್ಲಿ ಪ್ರಯೋಗ ಮಾಡಿದ್ದಾರೆ. ಅಲ್ಲದೇ ಪ್ರವಾಸ ಪದದ ಸಮಾನಾರ್ಥಗಳಲ್ಲಿ ಪ್ರದಕ್ಷಿಣೆ, ಪರ್ಯಟನೆ, ಪ್ರಯಾಣ, ಯಾತ್ರೆ, ಸುತ್ತಾಟ, ಸಂಚಾರ ಮೊದಲಾದ ಪದಗಳನ್ನು ಬಳಸಲಾಗುತ್ತಿದೆ. ವಾಸ್ತವವಾಗಿ ಪ್ರವಾಸ ಎಂಬುದು ಸಂಸ್ಕೃತ ಪದವೆಂಬುದು ಸ್ಪಷ್ಟವಾದುದು. ಇದಕ್ಕೆ ಇಂಗ್ಲೀಷ್‌ನಲ್ಲಿ ಖಿಖಂಗಿಇಐ ಎಂದು ಕರೆಯಲಾಗುತ್ತದೆ. ಈ ಪದಕ್ಕೆ ನೀಡಿರುವ ಅರ್ಥಗಳನ್ನು ವಿವಿಧ ಗ್ರಂಥಗಳ, ವಿವಿಧ ಬರಹಗಾರರ ಹೇಳಿಕೆಗಳ ಆಧಾರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೨.೨ ಪ್ರವಾಸದ ವ್ಯಾಪ್ತಿ ಮತ್ತು ಉದ್ದೇಶ:

ಪ್ರವಾಸ ಮಾನವನ ಮೂಲ ಪ್ರವೃತ್ತಿಯಾಗಿದೆ. ಇದು ಆದಿಮಾನವನ ಆಹಾರ ಹುಡುಕಾಟದಲ್ಲಿ, ಬದುಕಿನ ಹೋರಾಟದಲ್ಲಿ ಮತ್ತು ತನ್ನ ನೆಲೆಯನ್ನು ಕಂಡುಕೊಳ್ಳುವಲ್ಲಿ ಜನ್ಯವಾದದ್ದು. ಮಾನವನ ಗುರಿಯ ಸಾಧನೆಗೆ ಇದು ನೆರವಾಗಿದೆ. ಈ ಮಾನವನು ತನಗೆ ಆಹಾರದ ಕೊರತೆಯುಂಟಾದಾಗ ಫಲವತ್ತಾದ ಕ್ಷೇತ್ರಗಳಿಗೆ ವಲಸೆ ಹೋಗಿ ಜೀವನ ನಿರ್ವಹಣೆ ಮಾಡುತ್ತಿದ್ದನು. ಇಲ್ಲಿ ಪ್ರಯಾಣವೆಂಬುದು ಇವನಿಗೆ ಅನಿವಾರ್ಯವಾಗಿತ್ತು. ಹೀಗಾಗಿ ಪ್ರವಾಸವು ಪರೋಕ್ಷವಾಗಿ ಮಾನವನ ಬದುಕಿನ ದಿಕ್ಕುಗಳನ್ನು ಬದಲಾಯಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ದೇಶವನ್ನು ನೋಡು ಕೋಶವನ್ನು ಓದು ಎಂಬ ನಾಣ್ಣುಡಿಯು ಪ್ರವಾಸದ ಮಹತ್ವವನ್ನು ವಿವರಿಸುತ್ತದೆ. ಮಾನವನ ಇಂದಿನ ಸ್ಥಿತಿಗೆ ಸಾವಿರಾರು ತಲೆಮಾರುಗಳ ಪ್ರವಾಸದ ಶ್ರಮ ಕಾರಣವಾಗಿದೆ. ಪ್ರವಾಸದ ಮೂಲ ಉದ್ದೇಶಗಳೇನು ಎಂಬುದರ ಬಗ್ಗೆ ಪ್ರವಾಸಿಗಳಿಂದ ರಚಿತವಾಗಿರುವ ಪ್ರವಾಸ ಸಾಹಿತ್ಯ ಕೃತಿಗಳಿಂದಲೇ ವಿವರಣೆಗಳು ದೊರೆಯುತ್ತವೆ. ಈ ಪ್ರವಾಸದ ವಿಚಾರವಾಗಿ ಕನ್ನಡ ವಿಶ್ವಕೋಶದಲ್ಲಿ ದೊರೆಯುವ ವ್ಯಾಖ್ಯಾನ ಈ ರೀತಿ ಇದೆ. 'ಯಾವ ಕೆಲಸವಿಲ್ಲದಿದ್ದರೂ ಊರು ಬಿಟ್ಟು ಸಾವಿರಾರು ಅನಾನುಕೂಲಗಳನ್ನು ಸಹಿಸಿ, ಎಲ್ಲಿಯೋ ಹೋಗಿ, ಎಲ್ಲೆಲ್ಲಿಯೋ ಅಲೆದಾಡಿ ಸುಖಪಟ್ಟೋ, ಕಷ್ಟಪಟ್ಟೋ ಹಿಂತಿರುಗುವ ಮನುಷ್ಯನನ್ನು ನೆನೆದಾಗ ಪ್ರವಾಸದ ಚಪಲ ಎಷ್ಟು ಮುಖ್ಯವಾದುದು ಎಂಬುದನ್ನು ತಿಳಿಯಬಹುದು'. ಭಾರತದ ಪೂರ್ವ ಚರಿತ್ರೆಯನ್ನು ಪರಿಶೀಲಿಸಿದರೆ ಸಮಾಜಗಳ ಮತ್ತು ಸಂಸ್ಕೃತಿಯ ವಲಸೆಯ ಪ್ರವಾಸವನ್ನು ಕಾಣಬಹುದು. ಆರ್ಯದ್ರಾವಿಡರ ವಲಸೆಗಳಲ್ಲಿ ಬದುಕಿನ ಹೋರಾಟವನ್ನು ಕಾಣಬಹುದು. ಭಾರತದಾದ್ಯಂತ ನೆಲೆಸಿದ್ದ ದ್ರಾವಿಡರು ಆರ್ಯರ ವಲಸೆಯ ಆಕ್ರಮಣದಿಂದ ತಮ್ಮ ನೆಲೆಯನ್ನು ದಕ್ಷಿಣ ಭಾರತಕ್ಕೆ ಸೀಮಿತಗೊಳಿಸಬೇಕಾಯಿತು. ಆರ್ಯರ ನಂತರದ ಗ್ರೀಕರು, ಪರ್ಷಿಯನ್ನರು, ಮೊಘಲರು, ಅರಬ್ಬರು, ಪೋರ್ಚುಗೀಸರು, ಫ್ರೆಂಚರು, ಡಚ್ಚರು ಮತ್ತು ಬ್ರಿಟೀಷರು ಹೀಗೆ ವಿವಿಧ ಸಮಾಜಗಳ ಸಾಂಸ್ಕೃತಿಕ ವಲಸೆ ನಡೆದಿದೆ. ಈ ಪ್ರವಾಸಗಳಿಗೆ ಒಂದೊಂದು ಕಾಲದಲ್ಲಿ ಒಂದೊಂದು ಮಹತ್ತರ ಉದ್ದೇಶವಿರುವುದನ್ನು ಕಾಣಬಹುದು. ಆಹಾರ ಮತ್ತು ವಸತಿಯ ಹುಡುಕಾಟದಿಂದ ಆರಂಭವಾದ ಉದ್ದೇಶವು ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಉದ್ದೇಶಗಳವರೆಗೆ ವ್ಯಾಪಿಸಿದೆ.

ನಗರೀಕರಣದ ಹಿನ್ನೆಲೆಯಲ್ಲಿ ಔದ್ಯೋಗಿಕ ಕ್ರಾಂತಿ, ತಂತ್ರಜ್ಞಾನ ಮತ್ತು ವಿಜ್ಞಾನದ ಪ್ರಗತಿಯಿಂದ ಆದಿಮಾನವನ ವಲಸೆಯ ಬದುಕಿನ ರೀತಿ ನೀತಿಗಳು ಬದಲಾಗಿ ಪ್ರವಾಸದ ಉದ್ಧೇಶಗಳೂ ಸಹ ಬದಲಾಗಿವೆ. ಆದರೂ ಪ್ರವಾಸವು ಹುಟ್ಟಿಕೊಂಡಿರುವ ಕಾರಣಗಳನ್ನು ಪ್ರಮುಖವಾಗಿ ಕೆಳಗಿನ ನಾಲ್ಕು ಉದ್ಧೇಶಗಳಿಂದ ಗುರುತಿಸಬಹುದು.

- ಸಾಮಾಜಿಕ ಕಾರಣದ ಪ್ರವಾಸಗಳು
- ಧಾರ್ಮಿಕ ಕಾರಣದ ಪ್ರವಾಸಗಳು

- ರಾಜಕೀಯ ಕಾರಣದ ಪ್ರವಾಸಗಳು
- ಆರ್ಥಿಕ ಕಾರಣದ ಪ್ರವಾಸಗಳು

- **ಸಾಮಾಜಿಕ ಕಾರಣದ ಪ್ರವಾಸಗಳು:** ಸಾಮಾಜಿಕ ಕಾರಣದಲ್ಲಿ ಹುಟ್ಟಿಕೊಂಡಿರುವ ಪ್ರವಾಸಗಳನ್ನು ಈ ರೀತಿಯಲ್ಲಿ ಪಟ್ಟಿ ಮಾಡಬಹುದಾಗಿದೆ. ಕುತೂಹಲದಿಂದ ಹುಟ್ಟಿಕೊಂಡವು. ಸಾಹಸಯಾತ್ರೆಗಳು, ಅನ್ಯ ಸಮಾಜದ ಆಕರ್ಷಣೆಯವು, ಪ್ರಾಕೃತಿಕ ವಿಕೋಪದಿಂದ ಜನ್ಯವಾದವು, ಜ್ಞಾನಾರ್ಜನೆಯ ಸಲುವಾದವು, ಅಶಾಂತ ಪ್ರದೇಶದಿಂದ ಬಿಡುಗಡೆ ಪಡೆಯುವ ಕಾರಣದವು, ಮನರಂಜನೆಯವು, ಸಾಮಾಜಿಕ ಚಳುವಳಿಗಾರರವು, ಕೌಟುಂಬಿಕ ಸಂಬಂಧಗಳ ಬೇಟಿಯ ಸಲುವಾಗಿ ಹುಟ್ಟುವ ಪ್ರವಾಸಗಳು ಹೀಗೆ ಹತ್ತು ಹಲವು ಸಾಮಾಜಿಕ ಕಾರಣದಿಂದ ಉಂಟಾಗುವ ಪ್ರವಾಸಗಳನ್ನು ಗುರುತಿಸಬಹುದು.
- **ಧಾರ್ಮಿಕ ಕಾರಣದ ಪ್ರವಾಸಗಳು:** ಧಾರ್ಮಿಕ ಕಾರಣದಿಂದ ಸೃಷ್ಟಿಯಾಗುವ ಪ್ರವಾಸಗಳಲ್ಲಿ ವಿವಿಧ ಧರ್ಮಗಳ ಆಕರ್ಷಣೆಯವು, ತೀರ್ಥಯಾತ್ರೆಗಳು, ಧಾರ್ಮಿಕ ಚಳವಳಿಯ ನೇತಾರರವು ಮತ್ತು ಧಾರ್ಮಿಕ ವಿಚಾರಗಳ ಪ್ರಚಾರಕ್ಕಾಗಿ ಕೈಗೊಂಡಿರುವ ಪ್ರವಾಸಗಳನ್ನು ಗುರುತಿಸಬಹುದು.
- **ರಾಜಕೀಯ ಕಾರಣದ ಪ್ರವಾಸಗಳು:** ರಾಜಕೀಯ ಕಾರಣದಲ್ಲಿ ಉಗಮವಾಗಿರುವ ಕಾರಣಗಳನ್ನು ಪರಿಶೀಲಿಸುವಾಗ ಸಾಮ್ರಾಜ್ಯಶಾಹದ ದಂಡಯಾತ್ರೆಗಳನ್ನು ವಿವಿಧ ರಾಜಕೀಯ ದಾಳಿ ಮತ್ತು ಲೂಟಿಗಳನ್ನು, ಯುದ್ಧ ನಿಮಿತ್ತವಾದವನ್ನು, ಸ್ವಾತಂತ್ರ್ಯ ಹಂಬಲದವನ್ನು, ರಾಜಕೀಯ ವ್ಯಕ್ತಿಗಳು, ರಾಯಭಾರಿಗಳ ಮತ್ತು ಅಂತರ್‌ರಾಷ್ಟ್ರೀಯ ಸಂಬಂಧಗಳ ಹಿನ್ನೆಲೆಯಲ್ಲಿ ಏರ್ಪಡುವ ಪ್ರವಾಸಗಳನ್ನು ಪಟ್ಟಿಮಾಡಬಹುದಾಗಿದೆ.
- **ಆರ್ಥಿಕ ಕಾರಣದ ಪ್ರವಾಸಗಳು:** ಆರ್ಥಿಕ ಕಾರಣದಿಂದ ಹುಟ್ಟಿಕೊಂಡಿರುವ ಪ್ರವಾಸಗಳಲ್ಲಿ ವ್ಯಾಪಾರ ನಿಮಿತ್ತವಾದವನ್ನು, ಉದ್ಯೋಗ ಹುಡುಕಾಟವನ್ನು, ನೈಸರ್ಗಿಕ ವಿಕೋಪಗಳಿಂದ ಅನಿವಾಸಿಯಾಗಿ ವಲಸೆ, ಗುಳೆ ಹೊರಟು ಇತರೆಡೆಗೆ ಉದ್ಯೋಗ ಮತ್ತು ನೆಲೆ ಅರಸುತ್ತಾ ಹೋಗುವ ಪ್ರವಾಸಗಳನ್ನು ಈ ಆರ್ಥಿಕ ಕಾರಣದ ಪ್ರವಾಸಗಳ ಹಿನ್ನೆಲೆಯಲ್ಲಿ ಕಾಣಬಹುದು.

ಜಗತ್ತಿನ ವೈವಿಧ್ಯಮಯವಾದ ಸಮಾಜ ಮತ್ತು ಸಂಸ್ಕೃತಿಗಳು ಹಾಗೂ ನೈಸರ್ಗಿಕ ಸೌಂದರ್ಯ ತಾಣಗಳು ಮಾನವನಲ್ಲಿ ಕುತೂಹಲ ಹುಟ್ಟಿಸಿ ಪ್ರವಾಸಕ್ಕೆ ಕಾರಣವಾಗುತ್ತವೆ. ಇದು ಮಾನವನ ಸಹಜ ಸ್ವಭಾವದ ಕುತೂಹಲವಾಗಿದೆ. ಈ ಕುತೂಹಲವೇ ಪ್ರವಾಸ ಹಾಗೂ ಪ್ರವಾಸ ಸಾಹಿತ್ಯದ ಉಗಮಕ್ಕೆ ಕಾರಣವಾಗುತ್ತದೆ.

೨.೪ ಪ್ರವಾಸದ ಸ್ವರೂಪ ಮತ್ತು ಮಾದರಿಗಳು:

ವೈಜ್ಞಾನಿಕ ಪ್ರಗತಿಯ ಮೊದಲಿನ ಮಾನವನ ಪ್ರವಾಸಗಳು ಸಾಮಾನ್ಯವಾಗಿ ಕಷ್ಟಕರವಾಗಿಯೂ ಮತ್ತು ಸಾಹಸಮಯವಾಗಿಯೂ ಇದ್ದವು. ಹಿಂದಿನ ಬಹುಪಾಲು ಪ್ರವಾಸಗಳು ದೀರ್ಘ ಕಾಲದವು. ಕೆಲವೊಮ್ಮೆ ಜೀವನ ಪರ್ಯಂತದ್ದವೂ ಆಗಿದ್ದವು. ಅಪಾರ ಕಷ್ಟ-ನಷ್ಟಗಳಿಗೆ ಈಡು ಮಾಡಿ ಸಾವು ನೋವುಗಳನ್ನು ತರುವಂತಹವಾಗಿದ್ದವು. ವಿಜ್ಞಾನ ಅಭಿವೃದ್ಧಿ ಹೊಂದಿದಂತೆ ಪ್ರವಾಸದ ದಿನಗಳು ದಿನೇ ದಿನೇ ವ್ಯತ್ಯಾಸವಾಗುತ್ತವೆ.

ಇಂದು ಕೆಲವೇ ಗಂಟೆಗಳಲ್ಲಿ ಅಂದಿನ ಮಾನವನು ಜೀವನ ಪರ್ಯಂತ ಕಾಣಲು ಸಾಧ್ಯವಾಗದಿದ್ದಷ್ಟು ಪ್ರದೇಶಗಳನ್ನು ಇಂದಿನ ಪ್ರವಾಸಿ ಪ್ರವಾಸ ಮಾಡಿ ಬರುವಷ್ಟು ಅಭಿವೃದ್ಧಿ ಹೊಂದಿದ್ದಾನೆ. ಅಂತೆಯೇ ಪ್ರವಾಸದ ಸಾರ್ಥಕತೆಯ ಮೇಲೂ ಈ ಪ್ರವಾಸದ ಸ್ವರೂಪಗಳು ಪ್ರಭಾವ ಬೀರಿವೆ. ಪ್ರವಾಸದ ವಿವಿಧ ಮಾದರಿಗಳನ್ನು ಈ ರೀತಿಯಲ್ಲಿ ಪಟ್ಟಿ ಮಾಡಬಹುದು.

೧) ಪಾದಯಾತ್ರೆಯ ಪ್ರಯಾಣಗಳು

೨) ಪ್ರಾಣಿ ವಾಹನದ ಪ್ರಯಾಣಗಳು

೩) ವಾಹನಗಳ ಭೂ ಪ್ರಯಾಣಗಳು

೪) ಹಡಗು ಪ್ರಯಾಣಗಳು

೫) ವಿಮಾನ ಪ್ರಯಾಣಗಳು

ಆದಿ ಮಾನವನು ಅನಿವಾರ್ಯವಾಗಿ ಪರ್ಯಟನೆ ಮಾಡಿದರೆ; ಇಂದಿನ ವ್ಯವಸ್ಥಿತ ಸಮಾಜದ ನಾಗರಿಕ ಪ್ರವಾಸಿಯೂ ಹವ್ಯಾಸಿ, ನಿಯೋಗಿ ಮತ್ತು ಉದ್ಯೋಗಿ ಎಂಬ ರೂಪದಲ್ಲಿ ಪ್ರವಾಸ ಮಾಡುತ್ತಾನೆ. ಆದರೂ ಅನಿವಾರ್ಯದ ಆಕಸ್ಮಿಕ ಪ್ರವಾಸಗಳನ್ನು ಇಂದು ಸಹ ಕಾಣಬಹುದು. ಹವ್ಯಾಸಿ ಪ್ರವಾಸಿಯೂ ಎಲ್ಲಾ ವಿಷಯದಲ್ಲಿಯೂ ಸ್ವತಂತ್ರ. ಇವನ ವೀಕ್ಷಣೆಗಳಿಗೆ ಯಾವುದೇ ರೀತಿಯ ಅಡೆತಡೆ, ಪರಿಮಿತಿ ಅಥವಾ ನಿರ್ಬಂಧಗಳಿರುವುದಿಲ್ಲ. ಆದರೆ ಸಮಾಜದ ಯಾವುದೇ ಘಟಕದ ನಿಯೋಜಿತ ಪ್ರವಾಸಿಯ ಪ್ರವಾಸಗಳಿಗೆ ಹಲವು ನಿರ್ವಂಧಗಳಿರುತ್ತವೆ. ಈ ನಿಯೋಗಿಯ ಮನಸ್ಸು ಮತ್ತು ಕಣ್ಣುಗಳು ಸ್ವತಂತ್ರವಿದ್ದರೂ ಪ್ರದೇಶದ ಪರಿಮಿತಿ ಇರುತ್ತದೆ. ಅಲ್ಲದೇ ಆರ್ಥಿಕ ಸಹಾಯದ ಇತಿಮಿತಿ ಇರುತ್ತದೆ.

ಲಿಖಿತಗೊಳ್ಳದ ಯಾವುದೇ ಪ್ರವಾಸದ ಮಾದರಿಗಳ ಪರಿಶೀಲನೆ ಕಷ್ಟವಾದರೂ ಮಾನವನು ಭಾಷೆ ಮತ್ತು ಬರವಣಿಗೆಗಳನ್ನು ದುಡಿಸಿಕೊಳ್ಳಲು ಪ್ರಾರಂಭಿಸಿದ ನಂತರ ಪ್ರವಾಸ ಕಥನಗಳ ರೂಪದಲ್ಲಿ ದಾಖಲಾಗಿದೆ. ಅಷ್ಟೇ ಅಲ್ಲದೇ ಈ ಪ್ರವಾಸದ ಮಾದರಿಗಳು ಸಾವಿರಾರು ವರುಷಗಳ ಹಿಂದೆಯೇ ಬರಹ ರೂಪಕ್ಕಿಳಿದು ದಾಖಲಾಗಿವೆ. ಭಾರತದ ಪ್ರಾಚೀನ ಕೃತಿಗಳಿಂದ ವೇದ, ಪುರಾಣ, ರಾಮಾಯಣ ಮತ್ತು ಮಹಾಭಾರತಗಳಂತಹ ಗ್ರಂಥಗಳಲ್ಲಿ ಪ್ರವಾಸದ ಮಾದರಿಗಳನ್ನು ಗುರುತಿಸಬಹುದು. ಇದರ ಜೊತೆಯಲ್ಲಿಯೇ ಐತಿಹಾಸಿಕವಾಗಿ ದಾಖಲಾಗಿರುವ

ಪ್ರವಾಸದ ಮಾದರಿಗಳನ್ನು ಪರಿಶೀಲಿಸಬಹುದು. ಅಲೆಗ್ಸಾಂಡರ್, ಮೆಗಾಸ್ತನೀಸ್, ನ್ಯೂನಿಚ್, ಬಾರ್ಬೋಸ್, ಪ್ಲೀನಿ, ಹ್ಯೂಯನ್‌ತ್ಸಾಂಗ್, ಇತ್ಸಿಂಗ್ ಹೀಗೆ ವಿವಿಧ ಪ್ರವಾಸಿಗರನ್ನು ಹೆಸರಿಸಬಹುದು. ಬ್ರಿಟಿಷರು ಸಾಮ್ರಾಜ್ಯ ಸ್ಥಾಪನೆಯ ದಾಹದಲ್ಲಿ ಸಾವಿರಾರು ಪ್ರವಾಸಿಗಳು ಭಾರತದಲ್ಲಿ ಪ್ರವಾಸ ಮಾಡಿದ್ದಾರೆಂದರೆ ಇದರ ಮಹತ್ವ ಅರಿವಾಗುತ್ತದೆ. ಇದಕ್ಕಾಗಿ ನೂರಾರು ಪ್ರವಾಸಗಳ ಸಾಹಿತ್ಯ ರೂಪದ ದಾಖಲೆಗಳು ಪ್ರವಾಸ ಮಾದರಿ ನಿರೂಪಣೆಗೆ ಪ್ರಾಮಾಣಿಕ ಸಾಕ್ಷಿಗಳಾಗಿವೆ.

ಅಧ್ಯಾಯ ೩ : ಪ್ರವಾಸ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆ :

ಪ್ರತಿಯೊಂದು ಭಾಷೆಯಲ್ಲಿಯೂ ಸಾಹಿತ್ಯದ ಇತರ ಪ್ರಕಾರಗಳಿರುವಂತೆ ಇತಿಹಾಸ ಮತ್ತು ಪ್ರಾಚೀನತೆಗಳು ಪ್ರವಾಸ ಸಾಹಿತ್ಯಕ್ಕೂ ಇವೆ. ಪ್ರವಾಸಗಳ ಅನುಭವಗಳು ಬರಹದ ಮೂಲಕ ದಾಖಲಾಗಲು ಪ್ರಾರಂಭಿಸಿದಂತೆ ಪ್ರವಾಸ ಸಾಹಿತ್ಯ ಪ್ರಕಾರ ಸೃಷ್ಟಿಯಾಗಿದೆ. ಪ್ರವಾಸ ಸಾಹಿತ್ಯ ಪ್ರಕಾರವು ಜಾಗತಿಕ ವ್ಯಾಪ್ತಿಯನ್ನು ಹೊಂದಿರುವಂತದ್ದು. ಸಾಹಿತ್ಯದ ಇತರ ಪ್ರಕಾರಗಳ ರೂಪುರೇಷೆಗಳನ್ನು ಬಹಿರಂಗಪಡಿಸುವುದಲ್ಲದೇ ಅವುಗಳ ಮೇಲೆ ಪರಿಣಾಮ ಬೀರುವಷ್ಟು ವೈಶಾಲ್ಯವನ್ನು ಪ್ರವಾಸ ಸಾಹಿತ್ಯ ಪ್ರಕಾರ ಪಡೆದುಕೊಂಡಿದೆ.

೩.೧ ಜಾಗತಿಕ ಪ್ರವಾಸ ಸಾಹಿತ್ಯದ ಇತಿಹಾಸ

ಜಾಗತಿಕ ಪ್ರವಾಸ ಸಾಹಿತ್ಯದ ಇತಿಹಾಸವನ್ನು ಗುರುತಿಸುವ ಈ ಸಂದರ್ಭದಲ್ಲಿ ಇಲ್ಲಿಯ ಪ್ರವಾಸಗಳ ಮನೋಧರ್ಮ ಮತ್ತು ಪ್ರವಾಸದ ಉದ್ದೇಶಗಳ ಅರಿವು ಅಗತ್ಯ. ಈ ಜಗತ್ತು ಮಾನವನಿಗೆ ಜೀವನದಲ್ಲಿಯ ಹೋರಾಟ ಸ್ವಭಾವವನ್ನು ಪ್ರಕೃತಿದತ್ತವಾಗಿ ಕಲ್ಪಿಸಿದೆ. ಮಾನವನ ಈ ಗುಣಗಳಿಗೆ ಪೂರಕವಾದ ಅವಕಾಶಗಳನ್ನು ನೀರು–ನೆಲ–ವಾತವರಣ ಕಲ್ಪಿಸಿವೆ. ಅಂತೆಯೇ ಅಲ್ಲಿಯ ನಿಸರ್ಗ ರಚನೆಯು ಕಷ್ಟಕರವಾರ ಹೋರಾಟದ ಬದುಕಿಗೆ ಕಾರಣವಾಗಿದೆ. ಹಾಗಾಗಿ ಪಾಶ್ಚಾತ್ಯರ ಬದುಕೇ ಪ್ರವಾಸದ ಬದುಕಾಗಿದೆ. ಇವರ ಪ್ರವಾಸಗಳೆಲ್ಲವೂ ಸಮುದ್ರ ಭೂಮಿಯೊಂದಿಗಿನ ಸಾಹಸದ ಯಾತ್ರೆಗಳಾಗಿವೆ. ಕ್ರಿಸ್ತಶಕದ ಆರಂಭವಷ್ಟೇ ಅಲ್ಲದೇ ಮಾನವನ ಇತಿಹಾಸದ ಪ್ರಾಚೀನ ಕಾಲದಿಂದ ಇರುವರೆಗೂ ಈ ಪ್ರಕ್ರಿಯೆಯೂ ಪುನರಾವರ್ತನೆಗೊಳ್ಳುತ್ತಿದೆ. ಮತ್ತು ವಿವಿಧ ರೂಪಗಳಲ್ಲಿ ವಿವಿಧ ಉದ್ದೇಶಗಳೊಂದಿಗೆ ಪ್ರಕಟವಾಗುತ್ತಿದೆ. ಇದಕ್ಕೆ ಇವರ ಅದಮ್ಯ ಉತ್ಸಾಹ, ಕುತೂಹಲ, ಸೀಮಿತ ಭೂಪ್ರದೇಶ ಮತ್ತು ಧಾರ್ಮಿಕ ಪ್ರೋತ್ಸಾಹಗಳೂ ಬಹುಮಟ್ಟಿಗೆ ಕಾರಣವಾಗಿವೆ. ಪ್ರಾಶ್ಚಾತ್ಯರ ಪ್ರವಾಸವೆಂದರೆ ಬಹುಪಾಲು ಸಾಗರದೊಂದಿಗಿನ ಸಾಹಸದ ಜೀವನವೇ ಆಗಿದೆ. ಹದಿನೆಂಟನೇ ಶತಮಾನದ ಉತ್ತರಾರ್ಧದಿಂದ ಪ್ರವಾಸ ಸಾಹಿತ್ಯವೂ ವಿಭಿನ್ನವಾದ ಅರ್ಥದ ಹುಡುಕಾಟದಲ್ಲಿ ತೊಡಗಿದೆ. ಜಾಗತಿಕ ಪ್ರವಾಸ ಸಾಹಿತ್ಯದ ಚರಿತ್ರೆಯ ಅಧ್ಯಯನ ಪ್ರಪಂಚದ ಮಾನವ ಸ್ವಭಾವಗಳನ್ನು ಅಭಿವ್ಯಕ್ತಿಸುವ ಒಂದು ಪ್ರಮುಖ ಸಾಧನವಾಗಿದೆಯೆಂದರೆ ಆಶ್ಚರ್ಯವಿಲ್ಲ.

೩.೨ ಭಾರತೀಯ ಪ್ರವಾಸ ಸಾಹಿತ್ಯದ ಇತಿಹಾಸ

ಪ್ರವಾಸ ಸಾಹಿತ್ಯವು ಭಾರತದಲ್ಲಿ ಬೆಳೆದು ಬಂದ ದಾರಿಯನ್ನು ಈ ಸಂದರ್ಭದಲ್ಲಿ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದ ಸಂಸ್ಕೃತ ಮತ್ತು ಹಿಂದಿ ಮತ್ತು ದಕ್ಷಿಣ ದ್ರಾವಿಡ ಭಾಷೆಗಳಿಂದ ತಮಿಳು, ತೆಲುಗು, ಮಲಯಾಳಂ ಹಾಗೂ ಕನ್ನಡ ಭಾಷೆಯಲ್ಲಿ ಪ್ರವಾಸ ಸಾಹಿತ್ಯ ಆರಂಭವಾದ ಬಗೆಯನ್ನು ವಿವಿಧ ಕೃತಿಗಳಲ್ಲಿ ಗುರುತಿಸಬಹುದು.

೩.೨.೧ ದ್ರಾವಿಡೇತರ ಭಾರತೀಯ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯದ ಇತಿಹಾಸ

ಸಂಸ್ಕೃತ ಭಾಷೆಯ ಸಾಹಿತ್ಯದ ಅಧ್ಯಯನದಿಂದ ದ್ರಾವಿಡ ಭಾಷೆಗಳ ಪ್ರವಾಸ ಸಾಹಿತ್ಯದ ಮೇಲಾಗಿರುವ ಪ್ರಭಾವ ಮತ್ತು ಪ್ರೇರಣೆಯನ್ನು ಅರಿಯಲು ಸಹಾಯಕವಾಗಿದೆ. ಸಂಸ್ಕೃತ ಸಾಹಿತ್ಯವು ತುಂಬಾ ಪ್ರಾಚೀನವಾದ ಇತಿಹಾಸವನ್ನು ಹೊಂದಿದ ಫಲವತ್ತಾದ ಸಾಹಿತ್ಯವನ್ನು ಹೊಂದಿರುವುದು ಸರ್ವವೇದ್ಯ. ಈ ಸಂಸ್ಕೃತ ಸಾಹಿತ್ಯದಲ್ಲಿ ಹಿಂದೆ ಪ್ರವಾಸ ಸಾಹಿತ್ಯವು ಪ್ರತ್ಯೇಕ ಪ್ರಕಾರವಾಗಿ ಬಾರದೆ ಉಳಿದ ಬರವಣಿಗೆಯಲ್ಲಿ ಅಂತಸ್ಥವಾಗಿದೆ. ಬಹುಪಾಲು ಕಾವ್ಯ, ಮಹಾಕಾವ್ಯ ಪ್ರಕಾರದಲ್ಲಿ ಪ್ರವಾಸದ ಅಂಶಗಳು ತುಂಬಿ ಹೋಗಿವೆ. ಇಲ್ಲಿ ಅನೇಕ ಪ್ರಯಾಣಗಳ, ತೀರ್ಥಕ್ಷೇತ್ರಗಳ, ಪ್ರದೇಶಗಳ ಮತ್ತು ಸಮಾಜದ ವರ್ಣನೆಯ ನೋಟವನ್ನು ಕಾಣಬಹುದು. ಸಮರ ಪುಂಗವ ದೀಕ್ಷಿತನ 'ಯಾತ್ರಾ ಪ್ರಬಂಧ' ಮತ್ತು ವಾದಿರಾಜರ 'ತೀರ್ಥ ಪ್ರಬಂಧದ' ಬಗೆಗೆ ವಿಮರ್ಶಿಸಿರುವ ಪ್ರೊ.ಶ್ರೀನಿವಾಸ ಹಾವನೂರ ಅವರು ನಮಗೆ ತೀರ್ಥ ಪ್ರಬಂಧದ ರಚನಾ ವರ್ಷವು ನಿಶ್ಚಿತವಾಗಿ ಗೊತ್ತಿಲ್ಲದಿದ್ದರೂ ಯಾತ್ರಾ ಪ್ರಬಂಧವು ೧೫೮೦ರ ಒಳಗೆ ರಚನೆಯಾಗಿರಬೇಕು ಎಂದಿದ್ದಾರೆ. ಇದರಿಂದ ತೀರ್ಥಪ್ರಬಂಧವು ಕಾಲಮಾನದ ದೃಷ್ಟಿಯಿಂದ ಸಂಸ್ಕೃತ ಸಾಹಿತ್ಯದಲ್ಲಿ ಪ್ರವಾಸ ಸಾಹಿತ್ಯ ಪ್ರಕಾರದ ಮೊದಲ ಕೃತಿಯಾಗಿ ದಾಖಲಾಗುತ್ತದೆ. ಶ್ರೀ ವಾದಿರಾಜರ ತೀರ್ಥಪ್ರಬಂಧವು ಧಾರ್ಮಿಕ ಪ್ರವಾಸವಾಗಿದ್ದು ಭಾರತದ ಪುಣ್ಯ ಕ್ಷೇತ್ರಗಳನ್ನು, ನದಿ ಸರೋವರಗಳನ್ನು ಕಾವ್ಯ ಮಾಧ್ಯಮದಲ್ಲಿ ನಿರೂಪಿಸುವ ಪ್ರವಾಸಾನುಭವವಾಗಿದೆ.

ಶ್ರೀ ಶೀಲ ದೀಕ್ಷಿತ ತಿರುಮಲಾಚಾರ್ಯರ 'ಕಾವೇರಿ ಗದ್ಯ' ಕೃತಿಯು ಕಾವೇರಿಯ ಉಗಮದ ಯಾತ್ರೆಯನ್ನು ವರ್ಣಿಸುವಂತದಾಗಿದ್ದು ಭಾರತದ ವಿವಿಧ ಪ್ರದೇಶಗಳ ಪ್ರವಾಸ ವಿವರವು ಪ್ರವಾಸ ವರ್ಣನೆಯಲ್ಲಿ ದೊರೆಯುತ್ತದೆ. ಕೇರಳದ ಪರಮೇಶ್ವರ ದ್ವಿಜರ 'ಕಾಶಿಯಾತ್ರಾ' ಪ್ರಬಂಧವು ಕೊಚ್ಚಿಯ ರಾಜ ವೀರ ಕೇರಳವರ್ಮನ ೧೯೮೨ರ ವಾರಣಾಸಿ ಯಾತ್ರೆಯ ವಿವರವಾಗಿದೆ. ಸೀತಾರಾಮಸೂರಿಯವರ 'ಕವಿ ಮನೋರಂಜನ ಕಾ ಚಂಪೂ' ಕೃತಿಯು ತಮ್ಮ ಗುರುಗಳ ಭಾರತದಾದ್ಯಂತ ಸುತ್ತಾಟವನ್ನು ನಾಲ್ಕು ಪರಿಚ್ಛೇದಗಳಲ್ಲಿ ನಿರೂಪಿಸಿದೆ. ವಿ.ಎಸ್. ರಾಮಸ್ವಾಮಿ ಶಾಸ್ತ್ರಿಯವರ ಹಿಮಾಲಯದ ಪವಿತ್ರ ಕ್ಷೇತ್ರಗಳ ವರ್ಣನೆಯನ್ನು ನೀಡುವ 'ಉತ್ತರಖಂಡ ಯಾತ್ರಾ' ಎಂಬ ಪ್ರವಾಸ ಕೃತಿಯಲ್ಲಿ ಅಲ್ಲಿಯ ಸಾಮಾಜಿಕ ಜೀವನವನ್ನು ವಿವರಿಸಿದ್ದಾರೆ. ಈ ರೀತಿಯಲ್ಲಿ ಆಧುನಿಕ ಸಂಸ್ಕೃತ ಸಾಪ್ತಾಹಿಕದಲ್ಲೂ ಸಹ ಪ್ರತ್ಯೇಕ ಪ್ರಕಾರವಾಗಿ ಪ್ರವಾಸ ಸಾಹಿತ್ಯ ಬೆಳೆದಿದೆ.

ಹಿಂದಿಯಲ್ಲಿ ಪ್ರವಾಸ ಸಾಹಿತ್ಯ ಸೃಷ್ಟಿಯಾಗತೊಡಗಿದ್ದು ವೃತ್ತ ಪತ್ರಿಕೆಗಳ ಮುಖಾಂತರವಾಗಿದೆ. ತದನಂತರ ಪ್ರತ್ಯೇಕವಾಗಿ ಪ್ರವಾಸ ಕಥನಗಳನ್ನು ಬರೆಯುವ ಕ್ರಮ ಆರಂಭವಾಯಿತು. ಅಂತಹ ಕೆಲವು ಸಾಹಿತ್ಯ ಕೃತಿಗಳನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಭಾರತೀಂದು ರವರು ಮೊದಲಿಗೆ ತಮ್ಮ ಪತ್ರಿಕೆಗಳಲ್ಲಿ ಸರಯೂಪಾರ್ ಕೆ ಯಾತ್ರಾ, ಹರಿದ್ವಾರ ಕೀ ಯಾತ್ರಾ ಮೊದಲಾದ ಪ್ರವಾಸ ಪ್ರಬಂಧಗಳನ್ನು ಬರೆದರು. ಇದೇ ಜಾಡಿನಲ್ಲಿ 'ಇಂದು', 'ಮರ್ಯಾದಾ' ಪತ್ರಿಕೆಗಳಲ್ಲಿ ಉತ್ತರ ದಕ್ಷಿಣ ಧ್ರುವ ಕಿ ಯಾತ್ರಾ, ವಿಲಾಯತ್ ಕಿ ಸೈರ್, ಯುದ್ಧ ಕ್ಷೇತ್ರ ಕಿ ಸೈರ್, ಜಪಾನ್ ಕಿ ಸೈರ್, ರಾಮೇಶ್ವರ ಯಾತ್ರಾ ಮೊದಲಾದ ಪ್ರವಾಸ ವರ್ಣನೆಗಳು ಪ್ರಕಟವಾದವು. ಪ್ರವಾಸ ಸಾಹಿತ್ಯ ರಚನೆಯಲ್ಲಿ ರಾಹುಲ ಸಾಂಕೃತ್ಯಾಯನವರು ತಮ್ಮ ಬದುಕಿನ ಬಹುಭಾಗವನ್ನು ಪ್ರವಾಸದಲ್ಲಿ ಕಳೆದು ಹಲವು ಉತ್ತಮ ಪ್ರವಾಸ ಕಥೆನಗಳನ್ನು ರಚಿಸಿದ್ದಾರೆ. ತಿಬ್ಬತ ಮೇ ಸದಾ ಬರಸ್, ಮೇರಿ ಯುರೋಪ್ ಯಾತ್ರಾ, ತಿಬ್ಬತ್ ಯಾತ್ರಾ, ಕಿನ್ನರ ದೇಶಮೇ, ರಾಹುಲ ಯಾತ್ರಾದಲೀ, ಯಾತ್ರಾ ಕೆ ಪನ್ನೇ, ಏಶಿಯಾಕೆ ದುರ್ಗ ಭೂಖಂಡೋಂ ಮೇ ಮುಂತಾದ ಪ್ರವಾಸ ಕಥನಗಳನ್ನು ನೀಡಿದ್ದಾರೆ. ರಾಹುಲರು ಮುಖ್ಯವಾಗಿ ಹಿಮಾಲಯದ ತಪ್ಪಲಿನಲ್ಲಿ ಬೌದ್ಧ ವಿಹಾರಗಳ ಸಾಹಿತ್ಯದ ಹುಡುಕಾಟದಲ್ಲಿ ತೊಡಗಿದವರು. ಸಹಜವಾಗಿಯೇ ಇವರ ಕೃತಿಗಳಲ್ಲಿ ನಿಸರ್ಗ ನೋಟಗಳು, ಪ್ರಕೃತಿ ವೈಶಿಷ್ಟ್ಯಗಳು ಮತ್ತು ಸಾಮಾಜಿಕ ಸ್ಥಿತಿಗತಿಗಳು ದಾಖಲಾಗಿವೆ.

೩.೨.೨ ದ್ರಾವಿಡ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯದ ಇತಿಹಾಸ

ಕನ್ನಡ ಪ್ರವಾಸ ಸಾಹಿತ್ಯದ ಅಧ್ಯಯನಕ್ಕೆ ಪೂರಕವಾಗಿ ಇದರ ಸೋದರ ಭಾಷೆಗಳಾದ ದ್ರಾವಿಡ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ ಬೆಳೆದು ಬಂದಿರುವ ರೀತಿ ಮತ್ತು ಕಾಲಮಾನವನ್ನು ಗುರುತಿಸಿಕೊಳ್ಳುವುದು ಅಗತ್ಯವಾದುದು. ಇದರಿಂದ ಕನ್ನಡ ಪ್ರವಾಸ ಸಾಹಿತ್ಯದ ಬಗೆಗೆ ಒಂದು ಖಚಿತ ನಿಲುವಿಗೆ ಬರಲು ಮತ್ತು ಸ್ಪಷ್ಟ ಅಭಿಪ್ರಾಯ ನೀಡಲು ಸಹಕಾರಿಯಾಗುತ್ತದೆ. ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ತುಳು ಭಾಷೆಗಳ ಗುಂಪಿನಲ್ಲಿ ತುಳುವಿನ ಹೊರತಾಗಿ ಇತರ ನಾಲ್ಕು ಭಾಷೆಗಳಿಲ್ಲಿ ಪ್ರವಾಸ ಸಾಹಿತ್ಯವು ಪ್ರತ್ಯೇಕ ಪ್ರಕಾರವಾಗಿ ಅಸ್ತಿತ್ವದಲ್ಲಿರುವುದು ಈ ಪ್ರಕಾರದ ತೌಲನಿಕ ಅಧ್ಯಯನಕ್ಕೆ ಸಹಾಯಕವಾಗಿದೆ. ದ್ರಾವಿಡ ಭಾಷೆಗಳೆಲ್ಲದರಲ್ಲಿಯೂ ಏಕಕಾಲದಲ್ಲಿ ಪ್ರವಾಸ ಸಾಹಿತ್ಯದ ಉಗಮವಾಗಿದೆ.

- **ತಮಿಳು ಪ್ರವಾಸ ಸಾಹಿತ್ಯದ ಇತಿಹಾಸ**

ತಮಿಳಿನಲ್ಲಿ ಮೊದಲಿಗೆ ಪ್ರವಾಸ ಸಾಹಿತ್ಯವು ತೀರ್ಥಯಾತ್ರೆಯ ಮುಖಾಂತರವೇ ಆಗಿದ್ದು ಆ ಹಿನ್ನಲೆಯಲ್ಲಿ ಪಗಡಾಲು ನರಸಿಂಹಲು ಅವರ ಆರ್ಯ ದಿವ್ಯ ದೀಶ ಯಂಕ್ತಿ ರೈ ಚರಿತ್ರವು' ಮತ್ತು ಕವಿತ್ತಲಮ ದೊರೆಸ್ವಾಮಿಯ 'ಗಂಗಾಯಾತ್ರಿ ರೈ ಪ್ರಭಾವವು' ಆರಂಭದ ಪ್ರವಾಸದ ಕೃತಿಗಳಾಗಿವೆ. ಇವೆರಡೂ ಕೂಡ ಉತ್ತರ ಭಾರತದ ತೀರ್ಥ

ಕ್ಷೇತ್ರಗಳ ವರ್ಣನೆಯನ್ನು ನೀಡುವ ತೀರ್ಥಯಾತ್ರೆಗಳಾಗಿವೆ. ತಿರುಪತಿಯಿಂದ ಕನ್ಯಾ ಕುಮಾರಿಯವರೆಗೆ ತೀರ್ಥಯಾತ್ರೆಯನ್ನು ಟಿ.ಎಮ್. ಭಾಸ್ಕರ ತೊಂಡಮಾನರ ನಾಲ್ಕು ಸಂಪುಟಗಳಲ್ಲಿ 'ವೆಂಗಡಮ ಮೊದಲ್ ಕನ್ಯಾ ಕುಮಾರಿ ವರೈ' ಎಂಬ ಗಮನಾರ್ಹ ಪ್ರವಾಸ ಕಥನಗಳಲ್ಲಿ ಕಾಣಬಹುದು. ಗೌತಮ ಬುದ್ಧರ ಪ್ರವಾಸ ಮಾರ್ಗದಲ್ಲಿ ಕೈಗೊಂಡ ಪ್ರಯಾಣವಾಗಿದ್ದು ತಾವು ಕಂಡ ಸ್ಥಳಗಳ ಇತಿಹಾಸ, ಶಿಲ್ಪ ಮತ್ತು ಸಂಸ್ಕೃತಿಯನ್ನು ವರ್ಣಿಸುವ ಕೃತಿಯಾಗಿದೆ.

- **ತೆಲುಗು ಪ್ರವಾಸ ಸಾಹಿತ್ಯದ ಇತಿಹಾಸ**

ತೆಲಗು ಪ್ರವಾಸ ಸಾಹಿತ್ಯವು ಕನ್ನಡ ಪ್ರವಾಸ ಸಾಹಿತ್ಯಕ್ಕಿಂತ ಮೊದಲೇ ಜನಿತವಾಗಿದ್ದರೂ ಪುಣ್ಯಾರ್ಜನೆಯೇ ಪ್ರಥಮ ಪ್ರವಾಸ ಕೃತಿಯ ಉದ್ದೇಶವೂ ಆಗಿದೆ. ಪ್ರವಾಸ ಮತ್ತು ಪ್ರವಾಸ ಸಾಹಿತ್ಯದ ಉಗಮದಲ್ಲಿ ಈ ಸಾಮ್ಯತೆ ಧಾರ್ಮಿಕ ಉದ್ದೇಶದ ಸಮರ್ಥನೆಗೆ ಸಹಕಾರಿಯಾಗಿದೆ.

ತೆಲುಗಿನಲ್ಲಿ ಏಣೆಗುಲ ವೀರಸ್ವಾಮಿ ಅಯ್ಯರರು ಬರೆದ 'ಕಾಶಿಯಾತ್ರಾ ಚರಿತ' ಎಂಬ ಮೊದಲ ಪ್ರವಾಸ ಕೃತಿಯ ಮುಖ್ಯ ಉದ್ದೇಶವೂ ಪುಣ್ಯಾರ್ಜನೆಯೇ ಆಗಿದೆ. ಇದರಲ್ಲಿ ಉತ್ತರ ಭಾರತದ ಸಂಸ್ಕೃತಿಯ ಚಿತ್ರಣವಿದೆ. ಕೋಲಂ ಶೇಷಾಚಲರು ಈಸ್ಟ್ ಇಂಡಿಯಾ ಕಂಪನಿಯ ಸೇವೆಯಲ್ಲಿದ್ದು ರಾಜ್ಯಪಾಲರೊಂದಿಗೆ ೧೮೪೬ ರಲ್ಲಿ ನೀಲಗಿರಿಗೆ ಯಾತ್ರೆ ಕೈಗೊಂಡಿದ್ದನ್ನು ತಮ್ಮ 'ನೀಲಗಿರಿಯಾತ್ರಾ' ಪ್ರವಾಸ ಕಥನದಲ್ಲಿ ನೀಡಿದ್ದಾರೆ. ಪ್ರಯಾಣದ ವಿವರಗಳೊಂದಿಗೆ ಕಾಂಚಿಪುರಂ, ವೆಲ್ಲೂರ, ಸೋಲಂ ಮೊದಲಾದ ಪ್ರದೇಶಗಳು ನೀಲಗಿರಿಯ ಬೆಟ್ಟಗುಡ್ಡಗಳು, ಪ್ರಾದೇಶಿಕ ವಿವರ, ಸಾಮಾಜಿಕ ಜೀವನವು ಸಾಹಿತ್ಯಾಂಶದಿಂದ ಕೂಡಿದ್ದು ಮೌಲಿಕ ಕೃತಿಯಾಗಿದೆ. ಪಾರ್ವತೀಶ್ವರ ಶಾಸ್ತ್ರೀಯವರ 'ಯಾತ್ರಾ ಚರಿತ್ರಾ' ಪ್ರವಾಸ ಕಥನವು ಭಾರತ ಪ್ರವಾಸವಾಗಿದ್ದು ಪೋಷಕರಾದ ರಾಜಾ ಬೊಬ್ಬಿಲಿಯವರೊಂದಿಗಿನ ಉತ್ತರ ಮತ್ತು ದಕ್ಷಿಣ ಯಾತ್ರಾನುಭವದಾಗಿದೆ. ರಾಜಗೋಪಾಲರಾವ್ ತೆರುವಲ್ಲರ 'ವಿಹಂಗಮಯಾನಮು' ಆಧುನಿಕ ಶೋಧಗಳ ಚಿತ್ರಣವಾಗಿದೆ.

ಹೀಗೆ ಪ್ರವಾಸ ಸಾಹಿತ್ಯದ ಬೆಳವಣಿಗೆಯ ಆರಂಭದ ಹಲವಾರು ಕೃತಿಗಳನ್ನು ಗುರುತಿಸಲಾಗಿದೆ.

- **ಕನ್ನಡ ಪ್ರವಾಸ ಸಾಹಿತ್ಯದ ಇತಿಹಾಸ**

ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ದಕ್ಷಿಣ ಯಾತ್ರಾ ಚರಿತ್ರೆ' ಪ್ರಥಮ ಪ್ರವಾಸ ಕೃತಿಯಾಗಿದೆ. ೧೮೯೦ರಲ್ಲಿ ಕರ್ಕಿವೆಂಕಟರಮಣ ಶಾಸ್ತ್ರಿ ಸೂರಿಯವರಿಂದ ರಚಿತವಾದ ಧಾರ್ಮಿಕ ಪ್ರವಾಸ ಕಥನ. ಕರ್ನಾಟಕ ದರ್ಶನ' ಪ್ರವಾಸ ಕೃತಿಯು ಬಿ.ಪ. ಕಾಳೆಯವರಿಂದ ೧೯೨೪ರಲ್ಲಿ ರಚಿತವಾಗಿದೆ. ನಂತರ ಜಯ ಕರ್ನಾಟಕ, ಪ್ರಬುದ್ಧ ಕರ್ನಾಟಕ ಪತ್ರಿಕೆಗಳಲ್ಲಿ ಹಲವಾರು ಪ್ರವಾಸ ಕುರಿತ ಲೇಖನಗಳು ಪ್ರಕಟಗೊಂಡಿವೆ ನಂತರ ೧೯೨೬ ರಲ್ಲಿ

ವಿ. ಸೀತಾರಾಮಯ್ಯ ಅವರಿಂದ ಪಂಪಾಯಾತ್ರೆ' ಎಂಬ ಪ್ರಮುಖ ಕೃತಿ ಪ್ರಕಟವಾಯಿತು ವಿಹಾರ, ಮನರಂಜನೆ, ವಾಸ್ತುಶಿಲ್ಪ ಪರಿಚಯದ ಕುತೂಹಲದೊಂದಿಗೆ ಧಾರ್ಮಿಕ ಆಸಕ್ತಿಯ ಪ್ರವಾಸಾನುಭವವಾಗಿದೆ. ಈ ಕೃತಿಯು ಮುಂದಿನ ಕನ್ನಡ ಪ್ರವಾಸ ಸಾಹಿತ್ಯ ರಚನಕಾರರಿಗೆ ಮಾರ್ಗದರ್ಶನ ಮಾಡುವಷ್ಟು ಪ್ರಭಾವಶಾಲಿಯಾಗಿದೆ ಹೀಗೆ ಪ್ರವಾಸ ಸಾಹಿತ್ಯದ ಇತಿಹಾಸವನ್ನು ಹಲವಾರು ಕೃತಿಗಳ ಹಿನ್ನಲೆಯಲ್ಲಿ ಗಮನಿಸಬಹುದಾಗಿದೆ.

ಅಧ್ಯಾಯ–೪

ಕನ್ನಡ ಪ್ರವಾಸ ಕಥನಗಳಲ್ಲಿ ಚಿತ್ರಣಗೊಂಡ ಭಾರತ

ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ಭಾರತದ ಬಗೆಯಷ್ಟೇ ಮಾತ್ರವಲ್ಲದೆ ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರದಲ್ಲಿಯೇ ಪ್ರಥಮ ಕೃತಿಯಾಗಿ ಕರ್ಕಿವೆಂಕಟರಮಣ ಶಾಸ್ತ್ರೀ ಸೂರಿಯವರ 'ದಕ್ಷಿಣ ಯಾತ್ರಾ ಚರಿತ್ರೆ' ಮಾನಿತವಾಗಿದೆ. ಇದು ೧೮೯೦ರಲ್ಲಿ ರಚಿತವಾದ ಧಾರ್ಮಿಕ ಪ್ರವಾಸ ಕಥನವಾಗಿದೆ. ಉಡುಪಿಯ ಶ್ರೀ ಕೃಷ್ಣ, ಸುಬ್ರಮಣ್ಯ ಮತ್ತು ಗುರುವಾಯೂರು ಮಾರ್ಗದ ತೀರ್ಥಯಾತ್ರೆಯ ಅನುಭವವನ್ನು ಚಿತ್ರಿಸುತ್ತದೆ. ಭಕ್ತಿ ಪ್ರಧಾನವಾದ ಧಾರ್ಮಿಕ ಮನೋಭೂಮಿಕೆಯ ಪ್ರವಾಸವಾಗಿದ್ದು ಪುಣ್ಯ ಕ್ಷೇತ್ರಗಳ ವಿವರಗಳನ್ನು ನೀಡುವ ಕೈಪಿಡಿಯಂತಹ ಪುಟ್ಟ ಕೃತಿಯಾಗಿದೆ. ಆರ್.ಟಿ. ಕರ್ಪೂರರ 'ತೀರ್ಥಯಾಟನೆಗಳು' ಕೃತಿಯು ೧೯೨೫ರಲ್ಲಿ ಪ್ರಕಟವಾಗಿದ್ದು ಮೂಲ ಉದ್ದೇಶ ಧಾರ್ಮಿಕ ಯಾತ್ರೆಯಾಗಿದೆ. ಇದು ತೀರ್ಥಯಾತ್ರೆಯ ಬಗೆಗಿನ ಜಿಜ್ಞಾಸೆ, ಅರ್ಥ, ವ್ಯಾಪ್ತಿ ಮತ್ತು ಮಹತ್ವಗಳ ಚರ್ಚೆಯನ್ನೊಳಗೊಂಡಿರುವ ಕೃತಿ. ತೀರ್ಥೋತ್ಪತ್ತಿಯ ಸಾಮಾನ್ಯ ವಿಚಾರ, ತೀರ್ಥಕ್ಷೇತ್ರಗಳ ಮಹತ್ವ, ಫಲಕಾರಿಯಾದ ಯಾತ್ರಾಪದ್ಧತಿ, ಯಾತ್ರಾಪದ್ಧತಿಯ ಆಧುನಿಕ ರೂಪಾಂತರ, ಕ್ಷೇತ್ರ ವರ್ಣನೆ ಮತ್ತು ಪಾತ್ರಾಪಾತ್ರ ವಿಚಾರ ಇವೆ ಮೊದಲಾಗಿ ಹತ್ತು ಲೇಖಾಂಕಗಳನ್ನೊಳಗೊಂಡಿದೆ.

೪.೧ ಭಾರತದ ಭೌಗೋಳಿಕ ವ್ಯಾಪ್ತಿಯ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ

ಭಾರತದ ಬಹುತೇಕ ಭಾಗಗಳನ್ನು ಇಲ್ಲವೇ ದಕ್ಷಿಣ ಭಾರತ, ಉತ್ತರ ಭಾರತಗಳ ಪ್ರಸಿದ್ಧ ಭಾಗಗಳನ್ನು ಸದರ್ಶಿಸಿ ತಮ್ಮ ಅನುಭವಗಳನ್ನು ಸಾಹಿತ್ಯಿಕವಾಗಿ ನಿರೂಪಿಸಿದವರು ಬೆರಳೆಣಿಕೆಯ ಮಂದಿ. ಟೂರಿಸ್ಟ್ ಆಗಿ ಆ ಮನೋಭಾವದಿಂದಲೇ ಭಾರತವನ್ನು ನೋಡಿದವರು ಬಹಳ ಜನ. ಕಲೆ, ಪ್ರಕೃತಿ, ಜನಜೀವನ, ಬದುಕು, ಸಂಸ್ಕೃತಿ ಹೀಗೆ ನಾನಾ ಮಜಲುಗಳಲ್ಲಿ ನಿಂತು ಭಾರತವನ್ನು ನೋಡಿದವರು, ಅಭ್ಯಾಸ ಮಾಡಿದವರು ಬಹಳ ಕಡಿಮೆ. ಕನ್ನಡಿಗರಾಗಿ ಹೀಗೆ ಸುತ್ತಾಡಿದವರಲ್ಲಿ ನಮ್ಮ ನೆನಪಿಗೆ ಥಟ್ಟನೆ ಬರುವವರು ಕಾರಂತರೊಬ್ಬರೇ. ಭಾರತದ ಭಾಗಗಳನ್ನು ಬೇರೆ ಬೇರೆ ಕಾರಣಗಳಿಗಾಗಿ ಸುತ್ತಾಡಿದವರು ಹಲವರಿರುವರು. ಉದಾಹರಣೆಗೆ ಸಿದ್ಧವನಳ್ಳಿ ಕೃಷ್ಣ ಶರ್ಮರು ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ವರ್ಧಾದ ಅವರ ಆಶ್ರಮಕ್ಕೆ ಬಂದು ಕೆಲಕಾಲ ಅಲ್ಲಿ ನೆಲೆನಿಂತರು. ಕೃಷ್ಣ ಶರ್ಮರು ಆಶ್ರಮದ ನಿತ್ಯಜೀವನವನ್ನು, ಅಲ್ಲಿನ ಜನರ ಸ್ವಭಾವಗಳನ್ನು ಅಲ್ಲಿನ ಶಿಕ್ಷಣ ಕ್ರಮವನ್ನು ಸೊಗಸಾಗಿ ನಿರೂಪಿಸಿರುವರು. ವೀ.ಚಿ. ಹಿತ್ತಲಮನಿಯವರ ಪ್ರವಾಸ ಪ್ರಧಾನವಾಗಿ ಭಾರತದ ಹಲವೆಡೆಗಳಲ್ಲಿನ ಒಕ್ಕಲುತನದ

ಅಭ್ಯಾಸ ಮಾಡುವುದಕ್ಕಾಗಿಯೇ ಆಗಿರುವಂತಿದೆ. ಕೃಷ್ಣಾನಂದ ಕಾಮತರು ಪಶ್ಚಿಮಬಂಗಾಳ ಮತ್ತು ರಾಜಸ್ತಾನದಲ್ಲಿ ತಮಗಾದ ಅನುಭವಗಳನ್ನು ಅಲ್ಲಿನ ಜನಜೀವನದ ಅಭ್ಯಾಸದೊಂದಿಗೆ ನಿರೂಪಿಸಲು ಯತ್ನಿಸಿರುವರು. ಹೆಚ್.ಎಸ್. ರಾಘವೇಂದ್ರರಾವ್ ಅವರು ಪಶ್ಚಿಮ ಬಂಗಾಳ ಮತ್ತು ಒರಿಸ್ಸಾ ರಾಜ್ಯಗಳಲ್ಲೂ, ಜೆ.ಪಿ. ಬಸವರಾಜ ಅವರು ಅಸ್ಸಾಂ ರಾಜ್ಯದಲ್ಲೂ ಪ್ರವಾಸ ಕೈಗೊಂಡಿದ್ದು ಆಯಾ ರಾಜ್ಯಗಳ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಕೊಡುಗೆಗಳ ಹಿನ್ನೆಲೆಯಲ್ಲಿ ಜನ–ಮನವನ್ನು ತಿಳಿಯುವ ಪ್ರಯತ್ನ ನಡೆಸಿರುವರು ಇವರ ಕೃತಿಗಳು ಪ್ರವಾಸ ಸಾಹಿತ್ಯಕ್ಕೆ ಒಳ್ಳೆಯ ಕೊಡುಗೆಗಳಾಗಿವೆ.

ನ.ರಾ.ಗಲಗಲಿ ಅವರ 'ಬದರಿ ನಾರಾಯಣ ದರ್ಶನ' ಕೃತಿಯು ತೀರ್ಥಯಾತ್ರೆಯ ಫಲವೇ ಆಗಿದೆ. ಉತ್ತರ ಭಾರತ ಪ್ರವಾಸದಲ್ಲಿಯ ತೀರ್ಥಕ್ಷೇತ್ರಗಳ ತೀರ್ಥಯಾತ್ರೆಯ ವರ್ಣನೆಯನ್ನೊಳಗೊಂಡ ಕೃತಿ. ಶ್ರೀ ಕೃಷ್ಣ ನಾರಾಯಣ ಗೋ ಸಾವಿಯವರ ನನ್ನ ಹಿಮಾಲಯ ಯಾತ್ರೆ, ಹಿಮಾಲಯ ದರ್ಶನ, ಕೈಲಾಸ ಮಾನಸ ಸರೋವರ ಯಾತ್ರೆ ಮತ್ತು ಉತ್ತರ ಹಿಂದೂಸ್ಥಾನ ಪ್ರವಾಸ ಕೃತಿಗಳು ಭಕ್ತಿ ಭಾವದ ಧಾರ್ಮಿಕತೆಯ ವಿವಿಧ ಕ್ಷೇತ್ರಗಳ ತೀರ್ಥಯಾತ್ರೆಯಾಗಿವೆ. ತೀರ್ಥಕ್ಷೇತ್ರದ ದರ್ಶನದಲ್ಲೂ ಹಲವಾರು ಸಾಮಾಜಿಕ ಸಾಂಸ್ಕೃತಿಕ ವಿಚಾರಗಳನ್ನೊಳಗೊಂಡಿದೆ. ಹಿಮಾಲಯದ ಪ್ರಕೃತಿ ಸೌಂದರ್ಯದ ವರ್ಣನೆ, ಪರ್ವತಗಳ ಎತ್ತರ ಮತ್ತು ನಿಸರ್ಗದ ಸಂಪತ್ತಿನ ವಿವರಗಳನ್ನು ನೀಡುತ್ತಾರೆ. ಹಿಮಾಲಯದ ಸಾಧುಗಳ, ಗಡವಾಲಿಗಳ ಸ್ವಭಾವ ಹಾಗೂ ಸಾಮಾಜಿಕ ಜೀವನ, ಅರವಿಂದ ನಿಕೇತನದ ಗುರುಕುಲದ ಚಿತ್ರಗಳನ್ನು ಕಾಣಬಹುದು. ಚಕ್ರೋತಾ ಭಾಗದ ಜೋನ್ಸಾರಿ ಜನರ ಸಂಪ್ರದಾಯದ ಬಗ್ಗೆ ಗಮನ ಸೆಳೆಯುತ್ತ, ಇವರಲ್ಲಿ ಅನೇಕ ಜನ ಅಣ್ಣ ತಮ್ಮಂದಿರು ಕೂಡಿ ಒಬ್ಬಳನ್ನು ಮದುವೆಯಾಗುವ ವಿಚಿತ್ರ ಪದ್ಧತಿ ಇದೆ; ಎಂದು ಬರೆಯುತ್ತಾರೆ. ಇವರ ಅತಿಥಿ ಸತ್ಕಾರ, ಸ್ವಭಾವ, ಟಿಬೇಟ್ ಜನರ ವೃತ್ತಿ ಮತ್ತು ಇಲ್ಲಿಯ ವಿವಾಹ ಸಂಪ್ರದಾಯದ ಬಗ್ಗೆ ವಿವರಿಸುವ ಒಂದು ಪ್ರಯೋಜನಕಾರಿ ಪ್ರವಾಸ ಕಥನವಾಗಿದೆ.

ಕಾರಂತರು ತಾವು ಕಂಡ ನಿಸರ್ಗ ಹಾಗೂ ವಾಸ್ತು ಕೃತಿಗಳ ಸೊಬಗನ್ನು ಓದುಗರಿಗೆ ಹೇಳಲು ಪ್ರಯತ್ನಿಸಿರುವರು. ಶೇದ ಬಾಳದಲ್ಲಿ ಶಾಂತಿನಿಕೇತನದಂತಹ ಆದರ್ಶ ವಿದ್ಯಾ ಪೀಠವನ್ನು ನಿರ್ಮಿಸುವ ಕನಸು ಹೊತ್ತು ಮಿರ್ಜಿ ಅಣ್ಣರಾಯರು ಭಾರತದ ಪ್ರಮುಖ ಭಾಗಗಳನ್ನು ಸುತ್ತಾಡಿರುವರು. ಹೆಚ್.ಎಸ್. ಜೋಡಿಯವರು ಅಜಂತಾ, ಎಲ್ಲೋರಗಳ ಕಲಾ ವೈಭವಗಳನ್ನು ಹೇಳಲು ತವಕಿಸಿರುವರು. ಹೀಗೆ ಇಲ್ಲಿನ ಪ್ರವಾಸದ ಗುರಿಗಳಲ್ಲಿ ವೈವಿದ್ಯತೆಯಿದೆ.

ಶಿವರಾಮ ಕಾರಂತರ ಅಬೂರಿನಿಂದ ಬರಾಮಕ್ಕೆ ಭಾರತದ ಪ್ರೇಕ್ಷಣೀಯ ಸ್ಥಳಗಳಲ್ಲಿ ಮುಖ್ಯವಾದ ಅಬೂ, ಅಜ್ಮೀರ, ಪುಷ್ಕರ, ಜಯಪುರ, ದಿಲ್ಲಿ, ಶಿಮ್ಲಾ, ಆಗ್ರಾ, ಕಾಶಿ, ಡಾಲ್ಮಿಯಾ ನಗರ, ಕಲ್ಕತ್ತಾ, ಬರಮಾ – ಈ ಪ್ರದೇಶಗಳ ಸಂಚಾರೀ ಕಥನವಾಗಿದೆ. ಕಾರಂತರು ನಿಸರ್ಗ ಹಾಗೂ ವಾಸ್ತುಕತೆಗಳ ಸೊಬಗಿನ ವಿಶೇಷತೆಯನ್ನು ನೋಡಿ ಅನುಭವಿಸಲು ಕೈಗೊಂಡ ಪ್ರವಾಸ ಇದಾಗಿದೆ. ಇಲ್ಲಿ ನಿಸರ್ಗ ಪ್ರಿಯನೊಬ್ಬನ, ಕಲಾರಾಧಕನೊಬ್ಬನ

ಸಹೃದಯ ಪರವಾದ ವಿಹಾರವನ್ನು ಕೃತಿಯುದ್ದಕ್ಕೂ ನಾವು ಕಾಣುತ್ತೇವೆ. ಕಣ್ಣಿಗೆ ನಿಲುಕುವಂತೆ ಮನಸ್ಸಿಗೆ ಮುಟ್ಟುವಂತೆ ವರ್ಣಿಸುವ ಅವರ ಬರವಣಿಗೆ ಇಲ್ಲಿ ಹೊಸ ಅನುಭವ ಪ್ರಪಂಚವನ್ನು ವಿಸ್ತರಿಸುತ್ತಾ ಹೋಗುತ್ತದೆ.

ಕೃಷ್ಣ ಶರ್ಮರ ದೇಶೀ ಸಂಸ್ಥಾನಗಳಲ್ಲಿ ಕೃತಿ ಪ್ರವಾಸಿಯೊಬ್ಬನು ತನ್ನ ಸುತ್ತಾಟದ ಕಾಲದಲ್ಲಿ ಕಂಡು ಕೇಳಿ ತಿಳಿದ ವಿಷಯಗಳನ್ನು ಸರಸವಾಗಿ ನಿರೂಪಿಸುವ ಪ್ರವಾಸ ಕಥನವಾಗಿದೆ. ಕರ್ನಾಟಕ, ಮಹಾರಾಷ್ಟ್ರ ಸಂಸ್ಥಾನಗಳ ಪ್ರವಾಸ ಕೈಗೊಂಡಾಗ ಲೇಖಕರಿಗೆ ಒದಗಿದ ವಿಶಿಷ್ಠ ಅನುಭವಗಳು ಅವರದೇ ಆದ ಅಪೂರ್ವ ಗದ್ಯಶೈಲಿಯಲ್ಲಿ ಮಿನುಗಿವೆ. ಹತ್ತು ಊರು ತಿರುಗಿದವ ಅಲ್ಲಿನ ಕಾಲ ದೇಶ ವರ್ತಮಾನವನ್ನು ಸರಸವಾಗಿ ಬಣ್ಣಿಸುವ ಪ್ರವಾಸ ಸಾಹಿತ್ಯದ ರೀತಿ ಇದು ಎಂದು ಲೇಖಕರು ಕೃತಿಯ ಬಗೆಗೆ ಹೇಳಿಕೊಂಡಿರುವ ಮಾತುಗಳು–ಪುಸ್ತಕ ಓದಿ ಮುಗಿದ ಮೇಲೆ ಸಹಜವೆನಿಸುತ್ತದೆ.

ಭೂದಾನ ಯಜ್ಞ ಯಾತ್ರೆ' ಕೃಷ್ಣ ಶರ್ಮರ ಇನ್ನೊಂದು ಕೃತಿ. ವಿನೋಬಾ ಬಾವೆಯವರು ಉತ್ತರ ಪ್ರದೇಶದ ಭೂದಾನ ಚಳುವಳಿಯ ಸಂದರ್ಭದಲ್ಲಿ ಮಾಡಿದ ಪಾದಯಾತ್ರೆಯ ಬಗೆಗಿನ ಒಂದು ವಿಸ್ತೃತ ಪರಿಚಯ ಇದಾಗಿದೆ. ಪಾದಯಾತ್ರೆಯ ನಿರೂಪಣೆ ಸ್ವಾರಸ್ಯಕರವಾಗಿದ್ದು ಪುಸ್ತಕ ಸುಸೂತ್ರವಾಗಿ ಓದಿಸಿಕೊಂಡು ಹೋದರು ಇದರಲ್ಲಿ ಭೂದಾನ ಚಳುವಳಿಯ ಬಗೆಗಿನ ವಿಚಾರಗಳು ಪ್ರಧಾನವಾಗಿರುವುದರಿಂದ ಪ್ರವಾಸದ ಕಾವು ಮನಸ್ಸನ್ನೂ ತಟ್ಟುವುದಿಲ್ಲ.

ಭಾರತದ ಪ್ರವಾಸ ಚಿತ್ರಗಳು' ಕೃತಿ ಜಿ. ಮರುಳು ಸಿದ್ದಪ್ಪನವರು ಕಾಶಿ, ವಾರಣಾಸಿ, ಸಾಂಚಿ, ಅಜಂತಾ, ಎಲ್ಲೋರ, ಮಾಮಲ್ಲಪುರ, ಕಲ್ಯಾಣ– ಈ ಪುಣ್ಯಕ್ಷೇತ್ರ ಹಾಗೂ ಕಲಾ ಬೀಡುಗಳಲ್ಲಿ ಸಂಚರಿಸಿ ಪಡೆದ ಅನುಭವಗಳ ಕಥನ. ಎರಡು ಭಾಗಗಳಾಗಿ ಬಂದ ಈ ಕೃತಿ ಮೊದಲನೆಯದರಲ್ಲಿ ನಮ್ಮ ನಾಡಿನ ಪ್ರಾಚೀನ ಸಂಸ್ಕೃತಿ, ಸಾಹಿತ್ಯ, ವಾಸ್ತುಶಿಲ್ಪ ಹಾಗೂ ಲಲಿತ ಕಲೆಗಳ ಕಿರುಪರಿಚಯವನ್ನು ಹೊಂದಿದೆ. ಎರಡನೇಯದರಲ್ಲಿ ಕರ್ನಾಟಕ ವಾಸ್ತುಶಿಲ್ಪದ–ಚಾಲುಕ್ಯ, ಹೊಯ್ಸಳ, ವಿಜಯನಗರಗಳ ವಿಸ್ತೃತವಾದ ಪರಿಚಯವನ್ನು ಕೊಡಲಾಗಿದೆ. ಈ ಬಗೆಯ ಅಧ್ಯಯನ ಪ್ರವಾಸಿಗರಿಗೆ ನಾಡಿನ ಸಾಂಸ್ಕೃತಿಕ ಕೊಡುಗೆಯ ಪರಿಚಯ ಮಾಡಿಕೊಡುತ್ತದೆ.

೪.೨. ಕರ್ನಾಟಕ ಭೌಗೋಳಿಕ ವ್ಯಾಪ್ತಿಯ ಪ್ರವಾಸ ಕಥನಗಳ ಹಿನ್ನೆಲೆಯಲ್ಲಿ:

ಕರ್ನಾಟಕದಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದ ಪ್ರವಾಸಿಗರ ಅನುಭವ ಕಥನ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಅವುಗಳಲ್ಲಿನ ಬಹುಪಾಲು ಬರಹಗಳು ಪ್ರವಾಸ ಸಾಹಿತ್ಯಕ್ಕೆ ಒಳ್ಳೆಯ ಕಾಣಿಕೆಗಳಾಗಿವೆ. ಪ್ರೊ. ವಿ.ಸೀತಾರಾಮಯ್ಯನವರ ಪಂಪಾಯಾತ್ರೆ' ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸಬಹುದಾಗಿದ್ದ ಮುಖ್ಯ ಕೃತಿಯಾಗಿದ್ದಿತು. ಇಂದಿಗೂ ಅದು ಪ್ರವಾಸ ಸಾಹಿತ್ಯದಲ್ಲಿ ಗಣನೀಯ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿ ಪರಿಗಣಿತವಾಗಿದೆ. ಎಲ್ಲಾ ಕಾಲಕ್ಕೂ ನಿಲ್ಲುವ ಕೃತಿ ಅದು. ಡಾ. ಹಿರೇಮಲ್ಲೂರು ಈಶ್ವರನ ಅವರ ಕವಿ ಕಂಡನಾಡು, ಗುಂಡ್ಮಿ–ಚಂದ್ರಶೇಖರ ಐತಾಳರ ಸೌಂದರ್ಯದ ಸಾನ್ನಿಧ್ಯದಲ್ಲಿ ಹಾಗೂ ಚೆಲುವು ಚೆಲ್ಲಿದಲ್ಲಿ,

ಶಂಕರ ಪಾಟೀಲರ ಸವಿ ಸಂಚಾರ, ಜಿರಿಗೆ ಕಟ್ಟೆ ಬಸಪ್ಪ ನವರ ಕರ್ನಾಟಕ ಯಾತ್ರೆ, ಪಾಟೀಲ ಪುಟ್ಟಪ್ಪನವರ ನನ್ನದು ಈ ಕನ್ನಡ ನಾಡು ವಿಷಯ ವ್ಯಾಪ್ತಿಯ ದೃಷ್ಠಿಯಿಂದ ಮಹತ್ವದ ಕೃತಿಗಳು. ಒಂದೇ ಕೃತಿಯಲ್ಲಿ ಬೇರೆ ಬೇರೆ ಲೇಖಕರು ಸ್ಥಳ ಪರಿಚಯ ಮಾಡಿಕೊಟ್ಟಿರುವರು. ಉದಾಹರಣೆಗೆ ವಿ.ಕೃ.ಗೋಕಾಕ್‌ರವರಿಂದ ಸಂಪಾದಿತವಾಗಿರುವ ಇಂದಿನ ಕರ್ನಾಟಕ. ಒಂದೇ ಪ್ರೇಕ್ಷಣೆಯ ಸ್ಥಳವು ಮೂವರು ಪ್ರವಾಸಿಗಳ ನೋಟಕ್ಕೆ ಹೇಗೆ ಭಿನ್ನ ಭಿನ್ನವಾಗಿ ಕಾಣಬಂದಿತು ಎಂಬುದರ ವಿಶಿಷ್ಠ ಪ್ರಯೋಗ ಶ್ರೀ ರಂಗ–ಮಂಗ–ರು ಮಾಡಿದ ಮುಕ್ಕಣ್ಣ ಯಾತ್ರೆಯಲ್ಲಿ ಕಂಡುಬರುತ್ತದೆ. ಭೂತ–ವರ್ತಮಾನ–ಭವಿಷ್ಯತ್ ಕಾಲಗಳಲ್ಲಿ ಕರ್ನಾಟಕ ಏಕೀಕರಣದ ಜ್ವಲಂತ್ ಸಮಸ್ಯೆಯ ಹಿನ್ನೆಲೆಯಲ್ಲಿ ನೀಡುವ ಪ್ರಯತ್ನವನ್ನು ಪಿ. ಚಂದ್ರಶೇಖರ ಹೆಗ್ಡೆಯವರ ಕರ್ನಾಟಕ ದಿಗ್ದರ್ಶನ'ದಲ್ಲಿ ನೋಡಬಹುದು.

ಕರ್ನಾಟಕವನ್ನು ಆಳಿದ ಮಹಾನ್ ಸಾಮ್ರಾಜ್ಯರಾದ ವಿಜಯನಗರ ಹಾಗೂ ಅವರ ಅರಸರ ನೆಲೆವೀಡು ಪ್ರಸಿದ್ಧಿ ಪುಣ್ಯಕ್ಷೇತ್ರವೂ ಆದ ಹಂಪೆಯ ಭಗ್ನಾವಶೇಷಗಳ ದರ್ಶನದ ಒಂದು ದಿನದ ಅನುಭವ ಕಥನ ವಿ.ಸೀತಾರಮಯ್ಯ ಅವರ ಪಂಪಾಯಾತ್ರೆ' ಯಲ್ಲಿ ಬಂದಿದೆ. ಈ ಕೃತಿಯನ್ನು ಕುರಿತಂತೆ ಎಸ್.ವಿ. ಪರಮೇಶ್ವರ ಭಟ್ಟರು ಈ ರೀತಿ ಹೇಳಿದ್ದಾರೆ. "ಎಂತಹ ಕಲಾ ಪ್ರೇಮಿಯಾಗಲಿ ಎಂತಹ ಇತಿಹಾಸ ಪ್ರೇಮಿಯಾಗಲಿ ಎಂತಹ ರಸಾಭಿಜ್ಞನಾಗಲಿ ಪಂಪಯಾತ್ರೆಯ ಪಠನಾನಂತರದಲ್ಲಿ ಹೊಸ ಒಂದು ಸಂಸ್ಕೃತಿಯ ಕಾಂತಿಯಿಂದ ದೀಪ್ತವಾದ ಮನಸ್ಸುಳ್ಳವನಾಗುತ್ತಾನೆ ಎನ್ನುವುದಲ್ಲಿ ಯಾವ ಸಂಶಯವೂ ಇಲ್ಲ."

ಗುಂಡ್ಮಿ ಚಂದ್ರಶೇಖರ್ ಐತಾಳರ ಸೌಂದರ್ಯದ ಸಾನ್ನಿಧ್ಯದಲ್ಲಿ ಎಂಬ ಕೃತಿಯು ಬೇಲೂರು, ಹಳೇಬೀಡು, ಸೋಮನಾಥಪುರ, ಶ್ರವಣ ಬೆಳಗುಳ, ಶೃಂಗೇರಿ, ಶ್ರೀರಂಗಪಟ್ಟಣ, ಹಂಪಿ, ಆಗುಂಬೆ, ಬಿಳಿಗಿರಿರಂಗನಬೆಟ್ಟ, ತಲಕಾಡು, ಶಿವನ ಸಮುದ್ರ, ಮೈಸೂರು ಈ ಸ್ಥಳಗಳ ಪ್ರವಾಸಾನುಭವವನ್ನು ಹೇಳುತ್ತದೆ. ಕರ್ನಾಟಕದ ಪ್ರಸಿದ್ಧ ಶಿಲ್ಪ ಕಲಾ ಬೀಡುಗಳ, ಸೌಂದರ್ಯದ ನೆಲೆಗಳ ಸೊಗಸಾದ ರಸಾರ್ದ್ರಮನದ ಪರಿಚಯ ಇಲ್ಲಿನ ಲೇಖನಗಳಿಂದ ಓದುಗನಿಗಾಗುತ್ತದೆ. ಕರ್ನಾಟಕದಲ್ಲಿನ ಪ್ರತಿಯೊಬ್ಬರು ನೋಡಲೇಬೇಕಾದ ಸ್ಥಳಗಳ ಬಗೆಗೆ ಒಳ್ಳೆಯ ವಿಷಯ ಸಾಮಗ್ರಿ ಈ ಗ್ರಂಥದಿಂದ ನಮಗೆ ದೊರೆಯುತ್ತದೆ.

ಹೀಗೆ ಕನ್ನಡದ ವಿವಿಧ ಕವಿಗಳು ಕರ್ನಾಟಕ ಹಾಗೂ ಭಾರತದ ವಿವಿಧ ಪ್ರದೇಶಗಳಿಗೆ ಸಂದರ್ಶಿಸಿ ಅವರ ಅನುಭವಗಳ ಆಧಾರದ ಮೇಲೆ ಆಯಾ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಅಂಶಗಳನ್ನು ತಮ್ಮ ಪ್ರವಾಸ ಕಥನಗಳಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಈ ಪ್ರವಾಸ ಕಥನಗಳನ್ನು ಈ ನಾಲ್ಕನೇ ಅಧ್ಯಾಯದಲ್ಲಿ ಸಮೀಕ್ಷಿಸಿದ್ದೇನೆ.

ಅಧ್ಯಾಯ-೫

ವಿದೇಶಿ ಅನುವಾದ ಪ್ರವಾಸಿಗರ ಕಥನಗಳಲ್ಲಿ ಭಾರತ

ವಿವಿಧ ಉದ್ದೇಶಗಳ ಪ್ರವಾಸಗಳನ್ನು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಪ್ರವಾಸಿಗಳಲ್ಲಿ ವೈವಿಧ್ಯತೆಯನ್ನು ಮತ್ತು ಪ್ರವಾಸ ಕಥನಗಳ ವಿಭಿನ್ನತೆಯನ್ನು ಕಂಡುಕೊಳ್ಳಲಾಗಿದೆ. ಭಾರತಕ್ಕೆ ಬಂದ ಹಲವಾರು ಪ್ರವಾಸಿಗಳ ಪ್ರವಾಸ ಕಥನವನ್ನು ಮತ್ತು ಅನುವಾದಿತ ಪ್ರವಾಸ ಕಥನಗಳನ್ನು ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿದೆ. ಅನ್ಯದೇಶಿಯರ ವೈವಿಧ್ಯಮಯ ಪ್ರವಾಸ ಕಥನಗಳು ಹಲವಾರಿವೆ ಅವುಗಳಲ್ಲಿ ಕನ್ನಡಕ್ಕೂ ಅನುವಾದಗೊಂಡಿರುವ ಪ್ರವಾಸ ಕಥನಗಳೆಲ್ಲವನ್ನೂ ಕ್ರೂಡೀಕರಿಸಿ ವಿದೇಶಿಯ ಬರಹಗಳ ಕನ್ನಡಾನುವಾದವನ್ನು ಸಮೀಕ್ಷೆ ಮಾಡಲಾಗಿದೆ. ವಿದೇಶಗಳಿಂದ ಭಾರತಕ್ಕೆ ಕ್ರಿಸ್ತ ಪೂರ್ವದಿಂದಲೇ ಹಲವಾರು ಪ್ರವಾಸಿಗಳು ಬಂದಿದ್ದಾರೆ. ಇವರಲ್ಲಿ ಗ್ರೀಕರು, ಚೀನಿಯರು, ಅರಬ್ಬಿಯರು, ಪರ್ಷಿಯನ್ನರು, ಪೋರ್ಚುಗೀಸರು, ಫ್ರೆಂಚರು, ಡಚ್ಚರು ಮತ್ತು ಬ್ರಿಟಿಷರು ಪ್ರಮುಖರು. ಈ ಪ್ರವಾಸಿಗಳು ಕೇವಲ ಪ್ರವಾಸ ಮಾತ್ರ ಮಾಡದೆ ತಮ್ಮ ಅನುಭವಗಳನ್ನು ತಮ್ಮ ತಮ್ಮ ಭಾಷೆಯಲ್ಲಿ ರಚಿಸಿದ್ದಾರೆ. ಈ ಪ್ರವಾಸಿಗಳ ಕ್ರಿ.ಪೂರ್ವದ ಪ್ರವಾಸಗಳಿಂದ ಇಪ್ಪತ್ತನೇ ಶತಮಾನದವರೆಗಿನ ಪ್ರವಾಸದ ಪಟ್ಟಿಯು ಬಹಳ ಉದ್ದವಾಗಿದೆ. ಅಲ್ಲದೆ ಸಾವಿರಾರು ಪ್ರವಾಸಿಗಳು ಭಾರತದ ಪ್ರವಾಸ ಕಥನಗಳನ್ನು ನೀಡಿದ್ದಾರೆ.

ಈ ಪ್ರವಾಸ ಕಥನಗಳಲ್ಲಿ ಚೀನಾ ದೇಶದ ಪ್ರವಾಸಿಗರ ಪ್ರವಾಸ ಕಥನವನ್ನು ಜಿ.ಪಿ. ರಾಜರತ್ನಂರವರು ಮೊದಲಿಗೆ ಕನ್ನಡದಲ್ಲಿ ನೀಡಿದ್ದಾರೆ. ಇವರ ಕೃತಿಗಳಾದ ಚೀನಾ ದೇಶದ ಬೌದ್ಧಯಾತ್ರಿಕರು' ಮತ್ತು ಫಾಹಿಯಾನನ ಕ್ಷೇತ್ರಯಾತ್ರೆ' ಎರಡು ಕೃತಿಗಳು ಭಾರತದ ಸನಾತನ ಧರ್ಮವಾದ ಬೌದ್ಧ ಧರ್ಮದ ಅರಿವು ಹಾಗೂ ಅಧ್ಯಯನದಿಂದ ಆಕರ್ಷಿತರಾಗಿ ಭಾರತಕ್ಕೆ ಪ್ರವೇಶಿಸಿದ ಚೀನಾ ಯಾತ್ರಿಕರುಗಳಿಂದ ಹ್ಯೂಯನ್ ತ್ಸಾಂಗ್, ಇತ್ಸಿಂಗ್, ಸುಂಗ್‌ಯನ್, ಸಘುವರ್ಮ ಮತ್ತು ಫಾಹಿಯಾನನ ಜೀವನ ಮತ್ತು ಪ್ರಯಾಣ ಸಾಹಸವನ್ನು, ಧಾರ್ಮಿಕ ಶ್ರದ್ಧೆಯನ್ನು ಚಿತ್ರಿಸಿದ್ದಾರೆ. ಇವರ ಧಾರ್ಮಿಕ ಭಕ್ತಿ ಭಾವವನ್ನು ಮತ್ತು ಭಾರತದ ಬಗೆಗಿನ ನೋಟವನ್ನು ಹಾಗೂ ಧರ್ಮದ ಅರಿವಿಗಾಗಿ ನಡೆಸಿದ ಪ್ರಯತ್ನಗಳನ್ನು ಇವರುಗಳು ಅನುಭವಿಸಿದ ಕಷ್ಟ ನಿಷ್ಠುರಗಳನ್ನು ಚಿತ್ರಿಸಿದ್ದಾರೆ. ಇವರ ಕನ್ನಡಾನುವಾದ ಕೆಲಸವು ಪ್ರಥಮವಾದುದಾಗಿದ್ದು ಕನ್ನಡ ಸಾಹಿತ್ಯಕ್ಕೆ ವಿಶಿಷ್ಠ ಪ್ರಕಾರದ ಸೇರ್ಪಡೆಯಾಗಿದೆ.

ವಿದೇಶಿ ಪ್ರವಾಸಿಗಳ ಪ್ರವಾಸ ಕಥನದ ಕನ್ನಡಾನುವಾದದಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು ಹೆಚ್.ಎಲ್. ನಾಗೇಗೌಡರದು. ವಿವಿಧ ದೇಶಗಳ ಹಲವಾರು ಪ್ರವಾಸಿಗಳ ಪ್ರವಾಸ ಕಥನಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲು ಬಹಳ ಶ್ರಮಿಸಿದ್ದಾರೆ. ಇವರ ಈ ಸಾಹಿತ್ಯ ಬಹಳಷ್ಟು ಪ್ರಯೋಜನ ಪಡೆದಿದೆ. ಇವರು ಸಂಪಾದಿಸಿ ಸಂಗ್ರಹಿಸಿದ ಈ ಪ್ರವಾಸಿ ಕಥನಗಳನ್ನು 'ಪ್ರವಾಸಿ ಕಂಡ ಇಂಡಿಯಾ' ಎಂಬ ಶೀರ್ಷಿಕೆಯಲ್ಲಿ ಆರು ವಿಸ್ತಾರವಾದ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಕ್ರಿ.ಪೂ. ೫ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದವರೆಗಿನ ೩೮ ಪ್ರವಾಸಿಗಳ ಪ್ರವಾಸ ಕಥನವನ್ನು ಮೊದಲನೇ ಸಂಪುಟದಲ್ಲೂ, ಕ್ರಿ.ಶ. ೧೩ನೇ

ಶತಮಾನದಿಂದ ೧೫ನೇ ಶತಮಾನದವರೆಗಿನ ೨೩ ಪ್ರವಾಸಿಗಳ ಪ್ರವಾಸ ಕಥನವನ್ನು ಎರಡನೇ ಸಂಪುಟದಲ್ಲೂ. ಕ್ರಿ.ಶ. ೧೫ನೇ ಶತಮಾನದಿಂದ ೧೬ನೇ ಶತಮಾನದವರೆಗಿನ ೧೫ ಪ್ರವಾಸಿಗಳ ಪ್ರವಾಸ ಕಥನವನ್ನು ೩ನೇ ಸಂಪುಟದಲ್ಲೂ, ಕ್ರಿ.ಶ. ೧೬–೧೮ನೇ ಪ್ರವಾಸಿಗಳ ಪ್ರವಾಸ ಕಥನವನ್ನು ನಾಲ್ಕನೇ ಸಂಪುಟದಲ್ಲೂ, ೬ನೇ ಸಂಪುಟದಲ್ಲಿ ೧೬–೧೮ನೇ ಶತಮಾನದ ಒಂಬತ್ತು ಪ್ರವಾಸಿಗಳ ಪ್ರವಾಸ ಕಥನದ ಸಂಗ್ರಹವಾಗಿದೆ. ಇವಿಷ್ಟು ಅಲ್ಲದೇ ಬಹಳ ಹಿಂದೆಯೇ ಮಾರ್ಕೊಪೊಲೋ ಪ್ರವಾಸ ಕಥನವನ್ನು ಪ್ರತ್ಯೇಕವಾಗಿ ನೀಡಿದ್ದಾರೆ. 'ಮಾರ್ಕೊಪೊಲೋ' ಎಂಬ ಶೀರ್ಷಿಕೆಯ ಈ ಕೃತಿಯು ಈತನ ಸಾಹಸಯಾನಕ್ಕೆ ಸೀಮಿತವಾದ ಕೃತಿಯಾಗಿದೆ. ಸುಮಾರು ಒಂದು ನೂರು ಪ್ರವಾಸಿಗಳ ಪ್ರವಾಸ ಕಥನವನ್ನು ಅನುವಾದಿಸಿ ಸಂಗ್ರಹ ರೂಪದಲ್ಲಿ ನೀಡಿರುವ ಶ್ಲಾಘನೀಯ ಕಾರ್ಯವೆಸಗಿದ್ದಾರೆ. ಅಲ್ಲಲ್ಲಿ ಪ್ರವಾಸಿಗಳ ನೋಟದಲ್ಲಿ ದೋಷಗಳನ್ನು ಗುರುತಿಸುತ್ತಾ ಅಡಿ ಟಿಪ್ಪಣಿಗಳೊಂದಿಗೆ ವಾಸ್ತವತೆಗೆ ಸಮೀಪವಾದ ವಿಚಾರ ಗ್ರಹಣಕ್ಕೆ ಸಹಕರಿಸಿದ್ದಾರೆ. ಇದು ಕನ್ನಡ ಪ್ರವಾಸ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯ ಭಂಡಾರಕ್ಕೊಂದು ಅಪೂರ್ವವಾದ ಕೊಡುಗೆಯೆಂದು ಹೇಳಬಹುದು. ಭಾರತದ ಬಗೆಗಿನ ವಿದೇಶಿ ಪ್ರವಾಸಿಗಳ ನೋಟದ ಸಮೀಕ್ಷೆಯು ಕನ್ನಡದ ಹೆಚ್.ಎಲ್. ನಾಗೇಗೌಡರು ಸಂಪಾದಿಸಿರುವ ಈ ಸಂಪುಟಗಳು ಪ್ರಮುಖ ಆಕರವಾಗಿವೆ. ಈ ಸಂಪುಟಗಳನ್ನು ಈ ಅಧ್ಯಾಯದಲ್ಲಿ ಕಾಲದ ಆಧಾರದ ಮೇಲೆ ವರ್ಗೀಕರಿಸಿಕೊಂಡು ಮೂರು ಉಪ ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದೇನೆ. ಮೊದಲನೇ ಉಪ ಅಧ್ಯಾಯದಲ್ಲಿ ಕ್ರಿ.ಪೂ. ೫ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದವರೆಗಿನ ೩೮ ಪ್ರವಾಸಿಗಳ ಪ್ರವಾಸ ಕಥನವನ್ನು, ಎರಡನೇ ಉಪ ಅಧ್ಯಾಯದಲ್ಲಿ ಕ್ರಿ.ಶ. ೧೩ ರಿಂದ ೧೫ನೇ ಶತಮಾನದವರೆಗಿನ ಪ್ರವಾಸ ಕಥನಗಳನ್ನು, ಮೂರನೇ ಉಪ ಅಧ್ಯಾಯದಲ್ಲಿ ಕ್ರಿ.ಶ. ೧೬ ರಿಂದ ೧೮ನೇ ಶತಮಾನದವರೆಗಿನ ಪ್ರವಾಸಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

೫.೧. ಕ್ರಿ.ಪೂ ೫ ರಿಂದ ಕ್ರಿ.ಶ ೧೩ನೇ ಶತಮಾನದ ಪ್ರವಾಸ ಕಥನಗಳು:

ಗ್ರೀಸಿನ ಚರಿತ್ರೆಯ ಪಿತಾಮಹನಾದ ಹೆರಡೊಟಸ್ ಭಾರತಕ್ಕೆ ಬಂದ ಪ್ರವಾಸಿಗಳಿಂದ ಕೇಳಿದ ಮತ್ತು ಪರ್ಶಿಯಾದ ಮೂಲಗಳಿಂದ ಸಂಗ್ರಹಿಸಿದ ಭಾರತದ ಬಗೆಗಿನ ವಿಚಾರಗಳನ್ನು ತನ್ನ 'ಚರಿತ್ರೆ' ಯಲ್ಲಿ ನೀಡಿದ್ದಾನೆ. ಕ್ರಿ.ಪೂ. ೫ನೇ ಶತಮಾನದ ಉತ್ತರಾರ್ಧಕ್ಕೆ ಸಂಬಂಧಿಸಿದ ಈ ಕೃತಿಯಲ್ಲಿ ಭಾರತದ ಭೌಗೋಳಿಕ ರಚನೆ, ಜನಾಂಗ, ಆಹಾರ ಪದ್ಧತಿ ಇವೇ ಮೊದಲಾದ ಸಂಗತಿಗಳ ನಿರೂಪಣೆಯಲ್ಲಿ ವಾಸ್ತವಿಕತೆಗಿಂತ ಉತ್ಪ್ರೇಕ್ಷೆಗಳು ಬಹಳವಿದೆ. ಅಂದು ಭಾರತದಲ್ಲಿದ್ದ ಆಹಾರ ವಿಚಾರದ ಬಗ್ಗೆ ವೃಥಾಶರೀರ ವ್ಯರ್ಥವಾಗುವುದಲ್ಲ ಕಾಯಿಲೆ ಬಿದ್ದ ಕೂಡಲೇ ಅವನನ್ನು ಕೊಂದು ಮಾಂಸವನ್ನು ಬೆಯಿಸಿ ತಿಂದು ಬಿಡುತ್ತಾರೆ ಎಂದು ಹೇಳುತ್ತಾನೆ. ಟೀಸಿಯಾಸನ ಅನುಪಲಬ್ಧ ಕೃತಿಯಾದ ಇಂಡಿಕಾ'ವು ಫೋಟಿಯೋಸನಿಂದ ಸಂಗ್ರಹಿತವಾಗಿರುವುದರ ಜೊತೆಗೆ ಈಲಿಯಸ್ ಮೊದಲಾದವರಲ್ಲಿ ಅಲ್ಪ ಸ್ವಲ್ಪ ವಿವರಗಳು ದೊರೆಯುತ್ತವೆ. ಪರ್ಶಿಯಾದ ರಾಜನ ಆಸ್ಥಾನದಲ್ಲಿದ್ದಾಗ ಭಾರತಕ್ಕೆ ಪ್ರವೇಶಿಸಿದ ಪ್ರವಾಸಿಗಳಿಂದ ಸಂಗ್ರಹಿಸಿದ ವಿಚಾರಗಳನ್ನು ನೀಡುತ್ತಾನೆ. ಕ್ರಿ.ಪೂ ೪ನೇ ಶತಮಾನದ ಈ ಕೃತಿಯಲ್ಲಿ

ಭಾರತದಲ್ಲಿ ಹರಿಯುವ ನದಿಗಳು, ಜನರು, ನ್ಯಾಯ, ನೀತಿಯ ವಿಚಾರ, ಪಿಗ್ಮಿ ಎಂಬ ಕುಳ್ಳು ಜನರ ವಿಚಾರ ಮತ್ತು ತೆಂಗಿನ ಮರದ ಬಗೆಗಿನ ವಿಚಿತ್ರ ಕಲ್ಪನೆಯನ್ನು ಕಾಣಬಹುದು. ಇಲ್ಲಿಯ ಪ್ರಾಣಿಗಳ ಬಗ್ಗೆ 'ಇಂಡಿಯಾ ದೇಶದ ಕುರಿ, ಮೇಕೆಗಳು ಕತ್ತೆಗಳಿಗಿಂತ ದೊಡ್ಡವು ಒಂದೊಂದು ನಾಲ್ಕಾರು ಮರಿ ಹಾಕುತ್ತವೆ' ಎಂದು ಬರೆದಿದ್ದಾನೆ.

ಮೆಗಾಸ್ತನೀಸ್ ಕ್ರಿ.ಪೂ ೩ನೇ ಶತಮಾನದಲ್ಲಿ ಭಾರತಕ್ಕೆ ಬಂದ ಪ್ರವಾಸಿ, ಅಲೆಗ್ಸಾಂಡರ್ ಗೆದ್ದ ರಾಜ್ಯಕ್ಕೆ ಅಧಿಪತಿಯಾಗಿದ್ದ ಸೆಲ್ಯೂಕಸ್ ನಿಂದ ಚಂದ್ರಗುಪ್ತನ ಆಸ್ಥಾನಕ್ಕೆ ರಾಯಬಾರಿಯಾಗಿ ನೇಮಿಸಲ್ಪಟ್ಟವನು. ಭಾರತದ ಭೌಗೋಳಿಕ ರಚನೆ, ಹಾವಾಗುಣ, ಜನಗಳ ನಡೆನುಡಿ ಇವರ ಕಲಾಸಂಸ್ಕಾರ ಮೊದಲಾದ ಚಿತ್ರಗಳನ್ನು ಕಾಣಬಹುದು. ಇವರ ಸ್ವಂತ ಕೃತಿಗಳು ಲಭ್ಯವಿರದಿದ್ದರೂ ಅಲ್ಲಲ್ಲಿ ಸಿಕ್ಕಿರುವ ಮಾಹಿತಿಗಳಿಂದ ಇವರ ಪ್ರವಾಸ ಕಥನವನ್ನು ಸಂಗ್ರಹಿಸಲಾಗಿದೆ. ಭಾರತದ ಸಾಮಾಜಿಕ ಬದುಕಿನ ಬಗ್ಗೆ ಬೆಳಕು ಚೆಲ್ಲುತ್ತಾ ಜನರು ಮಾಡಿಕೊಳ್ಳುವ ಕರಾರು ಕಟ್ಟಳೆಗಳಿಗೆ ಮೊಹರಾಗಲೀ, ಸಾಕ್ಷಿಯಾಗಲೀ ಇರುವುದಿಲ್ಲ. ಪರಸ್ಪರ ನಂಬಿಕೆಯ ಮೇಲೆ ವ್ಯವಹಾರ ನಡೆಸುತ್ತಾರೆ ಎಂದು ವರ್ಣಿಸುತ್ತಾನೆ. ಇಲ್ಲಿಯ ಸ್ತ್ರೀಯರು ಶೀಲಕ್ಕೆ ನೀಡುವ ಮಹತ್ವ, ವಿವಾಹ ಸಂಪ್ರದಾಯ, ರಾಜನ ಆಡಳಿತ ಕ್ರಮ ಮತ್ತು ವರ್ಗ ವ್ಯವಸ್ಥೆಯಲ್ಲಿ ವೇದಾಂತಿಗಳ ಕರ್ಮದ ಬಗ್ಗೆ ವಿವರಿಸುತ್ತಾ ಸತ್ತವರ ಶ್ರಾದ್ಧಾ ಕ್ರಿಯೆಗಳನ್ನು ಮಾಡುವುದಕ್ಕೂ ಮತ್ತು ಬದುಕಿರುವಾಗ ಮಾಡಬೇಕಾದ ಯಜ್ಞ ಯಾಗಾದಿಗಳಿಗೂ ಬೇರೆಯವರು ಇವರನ್ನು ನೇಮಿಸಿಕೊಳ್ಳುತ್ತಾರೆ ಎಂದು ಚಿತ್ರಿಸುತ್ತಾನೆ. ಹೀಗೆ ಈ ಭಾಗದಲ್ಲಿ ಕ್ರಿ.ಪೂ. ೫ ರಿಂದ ಕ್ರಿ.ಶ. ೧೨ನೇ ಶತಮಾನದ ಅವಧಿಯಲ್ಲಿ ಭಾರತವನ್ನು ಸಂದರ್ಶಿಸಿದ ೩೮ ಪ್ರವಾಸಿಗಳ ಕಥನಗಳನ್ನು ಸಮೀಕ್ಷಿಸಲಾಗಿದೆ.

೫.೨. ಕ್ರಿ.ಶ ೧೩ ರಿಂದ ೧೫ನೇ ಶತಮಾನದ ಪ್ರವಾಸ ಕಥನಗಳು:

ಕ್ರಿ.ಶ. ೧೩–೧೫ನೇ ಶತಮಾನದ ನಡುವೆ ಭಾರತವನ್ನು ಸಂದರ್ಶಿಸಿದ ಪ್ರವಾಸಿಗರ ಬರವಣಿಗೆಗಳನ್ನು ಈ ಭಾಗದಲ್ಲಿ ಬಳಸಿಕೊಳ್ಳಲಾಗಿದೆ. ಈ ಅವಧಿಯಲ್ಲಿ ಭಾರತಕ್ಕೆ ಬಂದ ಮಾರ್ಕೋಪೋಲೋನ ಪ್ರವಾಸವು ವಿವಿಧ ಕಾರಣಗಳನ್ನು ಒಳಗೊಂಡಿದೆ. ಇಟಲಿಯಿಂದ ಹೊರಟು ಟರ್ಕಿ, ಇರಾಕ್, ಇರಾನ್, ಆಫ್ಘಾನಿಸ್ತಾನ್, ದಕ್ಷಿಣ ರಷ್ಯಾ, ಮಂಗೋಲಿಯಾ, ಚೀನಾ, ಜಾವಾ, ಸುಮಾತ್ರಾ, ಸಿಲೋನ್, ಇಂಡಿಯಾ ಮೊದಲಾದ ಪ್ರದೇಶಗಳ ಪ್ರವಾಸವನ್ನು ಪೂರೈಸಿದ್ದಾನೆ. ಇವನೊಬ್ಬ ಪ್ರಮುಖ ಪ್ರವಾಸಿಯಾಗಿದ್ದು ಭಾರತದ ಬಗ್ಗೆ ನೀಡಿರುವ ಪ್ರವಾಸಾನುಭವಕ್ಕೆ ಬಹಳ ಪ್ರಾಮುಖ್ಯತೆ ಇದೆ. ತಮಿಳುನಾಡಿನ ಮಾಬಾರ್‌ನಿಂದ ಅರಂಭಿಸಿ ಇಲ್ಲಿಯ ಪಾಂಡ್ಯ ರಾಜರುಗಳ ರಾಜ್ಯಭಾರ, ರಾಜರುಗಳ ಬದುಕು ಮತ್ತು ಜೀವನ ರೀತಿಯನ್ನು ವಿವರಿಸಿದ್ದಾನೆ. ಭಾರತದಲ್ಲಿಯ ಕುದುರೆಗಳು, ಇವುಗಳ ಉಪಯೋಗ, ಸಾಮಾಜಿಕ ವಿಚಾರವಾದ ಸತಿಸಹಗಮನವನ್ನು ಚಿತ್ರಿಸಿದ್ದಾನೆ. ಭಾರತೀಯ ಧಾರ್ಮಿಕ ವಿಚಾರದ ಬಗ್ಗೆ ಬಹಳ ಜನಗಳು ಗೋವುಗಳನ್ನು ಪೂಜಿಸುತ್ತಾರೆ. ಗೋವು ಬಹಳ ಪವಿತ್ರವಾದುದೆಂದು ಇವರ ಭಾವನೆ. ಏನೇ ಆದರೂ ಗೋಮಾಂಸವನ್ನು ತಿನ್ನುವುದಿಲ್ಲ ಗೋವನ್ನು ಕೊಲ್ಲುವುದೂ ಇಲ್ಲ ಎಂದು

ಬರೆದಿದ್ದಾನೆ. ದಿನನಿತ್ಯದ ಭಾರತೀಯರ ಸ್ನಾನದಭ್ಯಾಸ, ಮಧ್ಯಪಾನ ನಿಷೇಧಿಸಿರುವ ವಿಚಾರ, ಇಲ್ಲಿಯ ಹವಾಗುಣ, ಜನರ ಆಚರಣೆಯಲ್ಲಿರುವ ನಂಬಿಕೆಗಳು ಮೊದಲಾದ ಧಾರ್ಮಿಕ ಹಾಗೂ ಸಾಮಾಜಿಕ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತಾನೆ. ಸಾಮಾಜಿಕ ಆಚಾರಗಳಾದ ದೇವದಾಸಿ ಪದ್ಧತಿ, ವಿಗ್ರಹಾರಾಧನೆ, ಅಂತ್ಯಕ್ರಿಯೆಯಾ ವಿಧಿಯ ಶವದಹನ, ತಾಂಬೂಲ ಸೇವನೆಯ ಅಭ್ಯಾಸ ಮತ್ತು ಆಹಾರದ, ಪ್ರಾಣಿ ಪಕ್ಷಿಗಳ ಬಗ್ಗೆ ಚಿತ್ರಿಸಿದ್ದಾನೆ. ಗುಜರಾತ್ ಮತ್ತು ವಿವಿಧ ರೇವು ಪಟ್ಟಣಗಳಲ್ಲಿನ ವ್ಯಾಪಾರ–ವ್ಯವಹಾರ ವಿಚಾರಗಳನ್ನು ತನ್ನ ಕಥನದಲ್ಲಿ ದಾಖಲಿಸಿದ್ದಾನೆ.

೧೪೪೪ರಲ್ಲಿ ಬಂದ ವೆನಿಸ್‌ನ ನಿಕೊಲೋ ಕಾಂಟಿಯು ಸಂಸಾರ ಸಮೇತಾ ಇಂಡಿಯಾಗೆ ಬಂದ ಮೊದಲ ವರ್ತಕನೆಂದು ಗುರುತಿಸಲಾಗಿದೆ. ಭಾರತದ ಮಲಬಾರ ತೀರ, ವಿಜಯನಗರ, ಪೆನುಗೊಂಡ, ಮಲಯಪುರ ಮುಂತಾದ ಪ್ರದೇಶಗಳನ್ನು ಸುತ್ತಾಡಿದ್ದಾನೆ. ಭಾರತದಲ್ಲಿ ಹರಡಿದ್ದ ಕ್ರೈಸ್ತ ಧರ್ಮ ಇದರ ವ್ಯಾಪ್ತಿ, ಎರಡನೇ ದೇವರಾಯನ ರಾಜ್ಯಭಾರ, ಅರಮನೆ, ರಾಣಿವರ್ಗ, ಆಡಳಿತ ವಿಚಾರ, ಗಂಗಾನದಿ ಮತ್ತು ಅದರ ಪ್ರಾಮುಖ್ಯತೆ, ಭಾರತದ ಪ್ರಾಣಿಗಳು ಆನೆಗಳನ್ನು ಹಿಡಿಯುವ ರೀತಿ ಮತ್ತು ಪಳಗಿಸುವ ವಿಚಾರಗಳನ್ನು ವಿವರಿಸುತ್ತಾನೆ. ಭಾರತದಲ್ಲಿರುವ ಸಾಮಾಜಿಕ ವಿಚಾರಗಳ ಬಗ್ಗೆ ಗಮನ ಸೆಳೆಯುತ್ತಾ ಈ ದೇಶದ ಗಂಡಸರು ಏಕಪತ್ನಿವ್ರತಸ್ಥರು. ಹೆಂಗಸರು ಗಂಡಸರಾಧಿಯಾಗಿ ಹಚ್ಚೆ ಹೊಯ್ಯಿಸಿಕೊಳ್ಳುತ್ತಾರೆ. ಎಲ್ಲರೂ ವಿಗ್ರಹಾರಾಧನೆ ಮಾಡುತ್ತಾರೆ ಎಂದು ವರ್ಣಿಸಿದ್ದಾನೆ. ಅಂದಿನ ಭಾರತದಲ್ಲಿ ಪಾಕಿಸ್ಥಾನ, ಸುಮಾತ್ರಾ, ಜಾವಾ, ಬರ್ಮಾ, ಸಿಲೋನ್ ಎಲ್ಲವೂ ಸೇರಿತ್ತು ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಭಾರತೀಯರ ಆಹಾರಪದ್ಧತಿ, ಉತ್ತರ ಕ್ರಿಯಾಕರ್ಮ, ಧಾರ್ಮಿಕ ವಿಚಾರಗಳು, ಪೂಜೆ, ಬಲಿ, ದಾನ ಮೊದಲಾದ ವಿಚಾರಗಳನ್ನು ನಿರೂಪಿಸಿದ್ದಾನೆ. ಭಾರತೀಯರ ಹಬ್ಬಹರಿದಿನಗಳು ಇವುಗಳ ಆಚರಣೆಯ ರೀತಿ–ನೀತಿಗಳು, ಅಪರಾಧಗಳ ಪತ್ತೆಯ ವಿಧಾನ ನ್ಯಾಯದಾನದ ರೀತಿ ಇವೇ ಮೊದಲಾದ ಸಂಗತಿಗಳನ್ನು ಈತನ ಕೃತಿಯಲ್ಲಿ ಕಾಣಬಹುದು. ಹೀಗೆ ಹಲವಾರು ಪ್ರವಾಸಿ ವಿದೇಶಿಗರ ಬರಗಳ ಹಿನ್ನೆಲೆಯಲ್ಲಿ ಈ ಅಧ್ಯಯವನ್ನು ಬರೆಯಲಾಗಿದೆ.

ಅಧ್ಯಾಯ–೬

ಕನ್ನಡ ಪ್ರವಾಸ ಸಾಹಿತ್ಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಘಟಕಗಳು

ವಿಶಾಲವಾದ ಈ ಪ್ರಪಂಚದಲ್ಲಿ ಹಲವಾರು ರೀತಿಯ ಮಾನವ ಜೀವಿಗಳು ಬದುಕುತ್ತಿದ್ದಾರೆ. ಮಾನವನ ಬಾಹ್ಯ ಸ್ವರೂಪದಲ್ಲಿ ಮತ್ತು ಧಮನಿಗಳಲ್ಲಿ ಹರಿಯುತ್ತಿರುವ ರಕ್ತದಲ್ಲಿ ಯಾವುದೇ ವ್ಯತ್ಯಾಸವಿಲ್ಲದಿದ್ದರೂ ಈತನ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಿರುವ ವಾಸಸ್ಥಳದ ಭೌಗೋಳಿಕ ರಚನೆ, ಹವಾಗುಣ, ನಿಸರ್ಗ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ಒಂದರಿಂದ ಮತ್ತೊಂದು ಸಮಾಜಕ್ಕೆ ಬಹಳಷ್ಟು ವ್ಯಾತ್ಯಾಸಗಳನ್ನು ಕಾಣಬಹುದು. 'ಮಾನವಕುಲ ತಾನೊಂದೆ ವಲಂ' ಎಂದು ವಿಶ್ವ ಭ್ರಾತೃತ್ವ ಸಾರಿದ ಆದಿಕವಿ ಪಂಪನು ಮಾನವನು ಸೃಷ್ಟಿಸಿಕೊಂಡಿರುವ ಜಾತಿ ಪ್ರಜ್ಞೆಯನ್ನು ತಿರಸ್ಕರಿಸಲು ಪ್ರಯತ್ನಿಸಿದವನು. ಈ ಅಭಿಪ್ರಾಯದಲ್ಲಿ ಮಾನವನಲ್ಲಿರುವ

ಮೇಲು–ಕೀಳು, ಹೆಚ್ಚು–ಕಡಿಮೆ, ಜೇಷ್ಠ–ಕನಿಷ್ಠ, ಉತ್ತಮ–ಅಧಮ ಇವೇ ಮೊದಲಾದ ಜಾತಿ ವರ್ಗದ ತತ್ವದ ನಿರಾಕರಣೆಯನ್ನು ಕಾಣಬಹುದು. ಆದರೆ ವಿವಿಧ ಸಮಾಜದ ಸಮೂಹದ ಬದುಕಿನಲ್ಲಿ ಅವರು ಜೀವನ ನಡೆಸುವ ರೀತಿಯಲ್ಲಿ ಅವರ ಆಚಾರ–ವಿಚಾರದಲ್ಲಿ, ಕೌಟುಂಬಿಕ ಸಂಬಂಧಗಳ ಗ್ರಹಿಕೆಯಲ್ಲಿ, ಪೂಜಿಸುವ ಧರ್ಮದೇವರುಗಳಲ್ಲಿ, ಆಚರಿಸುವ ಹಬ್ಬ ಹರಿದಿನಗಳಲ್ಲಿ ಅವರದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿರುತ್ತವೆ. ಆ ಸಮಾಜದ ಹಿನ್ನೆಲೆಯಲ್ಲಿ ಸಹಜವಾಗುವಂತಹ ವಿಷಯಗಳು ಮತ್ತೊಂದರ ಹಿನ್ನೆಲೆಯಲ್ಲಿ ಅಸಹಜವಾಗಿ, ಆಶ್ಚರ್ಯಕರವಾಗಿ ಕಾಣಬಹುದು. ಯಾವುದೇ ಸಮಾಜದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಆಯಾಯ ಸಮಾಜದ ಒಟ್ಟು ಸ್ವರೂಪವನ್ನು ಅನ್ಯಸಮಾಜವೊಂದಕ್ಕೆ ಪರಿಚಯಿಸುವ ಸಾಧನಗಳಾಗಿವೆ. ಈ ಅಂಶಗಳ ಪರಿಚಯ ಒಂದು ಸಮಾಜದ ಮತ್ತು ನಾಡಿನ ಸಮಗ್ರ ಪರಿಚಯಕ್ಕೆ ಸಾಧನವಾಗುವಂತಹದು.

೬.೧. ಭಾರತೀಯ ಸಮಾಜ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ:

ವಾಸ್ತವವಾಗಿ ಭಾರತದ ಪ್ರಾಚೀನ ಸಮಾಜ ಮತ್ತು ಸಂಸ್ಕೃತಿಗಳ ವಿಚಾರಗಳೇ ಇಂದು ನಮಗೆ ಅಪರಿಚತವಾಗಿ ಆಶ್ಚರ್ಯಕರವಾಗಿ ಕಾಣುತ್ತವೆ. ಕ್ರಿ.ಪೂ. ೫ನೇ ಶತಮಾನದಿಂದ ಹಲವಾರು ಶತಮಾನಗಳವರೆಗಿನ ಭಾರತೀಯ ಸಮಾಜದ ಸಾಂಸ್ಕೃತಿಕ ವಿಚಾರಗಳು ಇಂದಿನವರೆಗೆ ಅಜ್ಞಾತವಾಗಿ ಉಳಿದಿರುವಲ್ಲಿ ಆಶ್ಚರ್ಯವೇನು ಇಲ್ಲ. ಈ ವಿಚಾರದಲ್ಲಿ ಪ್ರಾಚೀನ ಭಾರತದಲ್ಲಿ ಪ್ರವಾಸ ಮಾಡಿದ ಪ್ರವಾಸಿಗಳ ಪ್ರವಾಸ ಕಥನಗಳು ಹಲವಾರು ವಿಷಯಗಳನ್ನು ನಿರೂಪಿಸುತ್ತವೆ. ಅಂತೆಯೇ ಈ ಅಂಶಗಳ ಕೈಗನ್ನಡಿಯಾಗಿ ಈ ಪ್ರವಾಸ ಕಥನಗಳು ಕಂಡುಬರುತ್ತವೆ. ಇಂದು ನಮಗೆ ಅನಾಗರಿಕವಾಗಿ ಮತ್ತು ಅಮಾನವೀಯವಾಗಿ ಕಾಣುವ ಹಲವಾರು ಸಾಮಾಜಿಕ ಪದ್ಧತಿಗಳು ಮತ್ತು ಆಚಾರಗಳು ಅಸ್ತಿತ್ವದಲ್ಲಿದ್ದುದನ್ನು ಗುತುತಿಸಬಹುದು. ಈ ಪ್ರವಾಸ ಕಥನಗಳಲ್ಲಿ ಕರ್ನಾಟಕದ ಇತಿಹಾಸವನ್ನು ಹುಡುಕುತ್ತಾ ಡಾ.ಸೂರ್ಯನಾಥ ಕಾಮಥ್ ಅವರು ಈ ಕೃತಿಗಳ ಮೌಲ್ಯದ ಬಗ್ಗೆ ಬರೆಯುತ್ತಾ; ಈ ಬರಹಗಳ ಉಪಯೋಗ ಅಪಾರ ಕೆಲವೊಮ್ಮೆ ಪೂರಕವೆನಿಸುವುದಕ್ಕಿಂತ ವಿವರವಾದ ಮೂಲ ಅಥವಾ ನವೀನವಾದ ಮಾಹಿತಿಯು ನಮಗೆ ಈ ಮೂಲಗಳಿಂದ ಒದಗಿದೆ ಎಂದು ಶ್ಲಾಘಿಸುವುದನ್ನು ಕಾಣಬಹುದು.

ವಿದೇಶಿಯ ಪ್ರವಾಸಿಗಳು ಪ್ರಾಚೀನ ಕಾಲದಿಂದಲೇ ಪ್ರವಾಸವನ್ನು ಮಾಡಿ ಭಾರತದ ವಿಚಾರವಾಗಿ ತಮ್ಮ ಪ್ರವಾಸ ಕಥನಗಳಲ್ಲಿ ಬಹಳಷ್ಟು ವಿಷಯಗಳನ್ನು ಸಂಗ್ರಹ ಮಾಡಿ ಉಪಕಾರ ಮಾಡಿದ್ದಾರೆ. ವಿವಿಧ ವಿದೇಶ ಭಾಷೆಗಳಲ್ಲಿರುವ ಈ ಪ್ರವಾಸ ಕಥನಗಳನ್ನು ಹೆಚ್.ಎಲ್. ನಾಗೇಗೌಡರು ಪ್ರವಾಸಿ 'ಕಂಡ ಇಂಡಿಯಾ' ಎಂಬ ಸಂಪುಟಗಳಲ್ಲಿ ಕನ್ನಡಕ್ಕೆ ಭಾಷಾಂತರಿಸಿಕೊಟ್ಟಿದ್ದಾರೆ. ಈ ಸಂಪುಟಗಳಲ್ಲಿ ವಿವಿಧ ಪ್ರವಾಸಿಗಳು ನಿರೂಪಿಸಿರುವ ಭಾರತದ ಸಾಮಾಜಿಕ ವಿಚಾರಗಳಿವೆ. ಇಲ್ಲಿಯ ಬೆಳೆಗಳಾದ ಅಕ್ಕಿ, ಬೆಳೆ, ಏಲಕ್ಕಿ, ಮಾವು, ದಾಳಿಂಬೆ, ಎಳ್ಳು, ಜೋಳ, ಗೋದಿ ಮೊದಲಾದವುಗಳನ್ನು ಗುರುತಿಸಿದ್ದಾರೆ. ಬೇಟೆಯಲ್ಲಿ ಬಳಸುವ ವಸ್ತುಗಳು ಮತ್ತು ವಿವಿಧ

ಜನಾಂಗಗಳ ಬಗ್ಗೆ ಬರೆಯುತ್ತಾ ಇವರ ಅರೆನಗ್ನ ಉಡುಪು ಮತ್ತು ವಿಚಿತ್ರ ತೆರನಾದ ಪ್ರಾಣಿ ಪಕ್ಷಿಗಳ ಸಮಾಜವನ್ನು ವರ್ಣಿಸಿದ್ದಾರೆ. ಭಾರತೀಯ ಸಮಾಜದ ವರ್ಣವ್ಯವಸ್ಥೆಯನ್ನು ಮತ್ತು ವರ್ಣಾಶ್ರಮವನ್ನು ವಿವರಿಸುತ್ತಾ ಕೆಲವರು ನಾಲ್ಕನ್ನು, ಎಂಟನ್ನು ಮತ್ತು ಹಲವಾರು ಜಾತಿಗಳನ್ನು ಪರಿಚಯಿಸುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಷ್ಟೇ ಅಲ್ಲದೇ ಅಸ್ಪೃಶ್ಯರ ಕೆಳಮಟ್ಟದ ಬದುಕು ಮತ್ತು ಸಾಮಾಜಿಕವಾಗಿ ಇವರಿಗೆ ದೊರೆತಿರುವ ಸ್ಥಾನಮಾನವನ್ನು, ಅಲ್ಲದೆ ಆಯಾಜಾತಿಗಳ ವೃತ್ತಿಯನ್ನು ಚಿತ್ರಿಸುತ್ತಾರೆ. ಆಯಾಯ ಜಾತಿಗಳ ಜೀವನ ರೀತಿ, ಆಹಾರ–ಆಚಾರ, ಸಾಮಾಜಿಕವಾಗಿ ಇವರಿಗಿರುವ ಸ್ಥಾನಮಾನ ಮತ್ತು ಕೌಟುಂಬಿಕ ಸಂಬಂಧಗಳನ್ನು ಚಿತ್ರಿಸಿದ್ದಾರೆ.

೬.೩ ಮಾನವ ವಿಜ್ಞಾನದ ಶಿಸ್ತಿನಲ್ಲಿ ಸಾಂಸ್ಕೃತಿಕ ವಿಚಾರಗಳು

ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರದಲ್ಲಿ ಹೊರಹೊಮ್ಮುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಮಾನವ ವಿಜ್ಞಾನದ ಹಿನ್ನೆಲೆಯಲ್ಲಿಯೂ ಪರಿಶೀಲಿಸಬಹುದಾಗಿದೆ. ಯಾವುದೇ ಸಮಾಜದ ಮಾನವನ ವಿಷಯವಾಗಿ ಸಮಗ್ರ ಜ್ಞಾನವನ್ನು ಪಡೆಯಲು ಮಾನವ ವಿಜ್ಞಾನವು ತನ್ನಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸಿದೆ. ಇತರೆ ಶಾಸ್ತ್ರಗಳಂತೆ ಮಾನವನ ಜೀವನದ ಒಂದು ಅಂಶವನ್ನು ಮಾತ್ರ ಪರಿಗಣಿಸದೆ ಮಾನವಕುಲದ ಸಮಸ್ತ ವಿಚಾರಗಳನ್ನು ಮತ್ತು ಈ ಮಾನವ ಸಮಾಜದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಮಾನವ ವಿಜ್ಞಾನವು ಪರಿಚಯಿಸುತ್ತದೆ. ನಿಸರ್ಗದತ್ತ ವಿಚಾರಗಳಿಂದ ತನ್ನ ಜೀವನವನ್ನು ರೂಪಿಸಿಕೊಂಡ ಸಮಾಜ ಜೀವಿಯಾದ ಮಾನವನಿಗೆ ಸಂಬಂಧಿಸಿದ ಪ್ರತಿಯೊಂದು ಕ್ಷೇತ್ರವನ್ನು ಕೂಲಂಕಷವಾಗಿ ವಿಮರ್ಶಿಸುತ್ತದೆ. ಮಾನವನ ಉಗಮದಿಂದ ಆರಂಭಿಸಿ ಆತನ ವಿವಿಧ ಅವಸ್ತಾಂತರಗಳನ್ನು, ಬೆಳದು ಬಂದ ರೀತಿಯನ್ನು, ಆತನ ನಡೆ–ನುಡಿಯನ್ನು ಮತ್ತು ತನ್ನ ಪ್ರಾದೇಶಿಕ ಪರಿಸರದಲ್ಲಿ ಅವನು ಸೃಷ್ಟಿಸಿಕೊಂಡಿರುವ ವಿವಿಧ ರೀತಿಂರು ಸೌಲಭ್ಯಗಳನ್ನು ಮಾನವ ವಿಜ್ಞಾನವು ಅಧ್ಯಯನ ಮಾಡುತ್ತದೆ.

ಹಲವಾರು ವಿದ್ವಾಂಸರುಗಳಿಂದ ವಿವಿಧ ರೀತಿಯ ಅಧ್ಯಯನಗಳಿಗೆ ಒಳಗಾಗಿರುವ ಮಾನವಶಾಸ್ತ್ರವು ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಬಗೆಗೆ ಆಸಕ್ತಿಪೂರ್ಣವಾದ ಜಿಜ್ಞಾಸೆಯನ್ನು ನೀಡುತ್ತದೆ. ಮಾನವನ ದೈಹಿಕ ಸ್ವರೂಪದಲ್ಲಿ ಬಾಹ್ಯ ರೂಪದಲ್ಲಿ ನಡೆದಿರುವ ವಿಕಾಸವನ್ನು ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪ್ರತಿಯೊಂದು ಘಟ್ಟಗಳನ್ನು ಈ ಶಾಸ್ತ್ರವು ಪರಿಚಯಿಸುತ್ತದೆ. ಮಾನವ ಸಮೂಹಗಳ ವ್ಯಕ್ತಿವೈಶಿಷ್ಟ್ಯವನ್ನು ಮತ್ತು ಸಾಮಾಜಿಕ ಪರಿವರ್ತನೆಯನ್ನು ಸಮಷ್ಠಿ ಪ್ರಜ್ಞೆಯೊಂದಿಗೆ ಚಿಂತಿಸುತ್ತದೆ. ಪ್ರತಿಯೊಬ್ಬ ಮಾನವನ ಜೀವನವು ಕೇವಲ ವ್ಯಕ್ತಿಗತವಾಗಿರದೆ ಸಮಷ್ಠಿಯದೂ ಆಗಿರುತ್ತದೆ. ಅಂದರೆ ಸಾಂಪ್ರಾದಾಯಿಕವಾದ ಬದುಕಿನ ಶೈಲಿ ಮತ್ತು ನಿಯಮಗಳಿಗೆ ವ್ಯಕ್ತಿ ಜೀವನವು ಬದ್ಧವಾಗಿರುತ್ತದೆ. ಈ ಸಾಂಪ್ರದಾಯಿಕವಾದ ಸಾಂಸ್ಕೃತಿಕ ಅಂಶಗಳು ಮಾನವನ ಹುಟ್ಟಿದಂದಿನಿಂದ ಅವನ ನಡವಳಿಕೆಯನ್ನು ಮತ್ತು ಭಾವನೆಯನ್ನು ರೂಪಿಸುವುದಲ್ಲದೆ ನಿಯಂತ್ರಣವನ್ನು ಮಾಡುತ್ತವೆ. ಆದುದರಿಂದ ಆಯಾ ಸಂಸ್ಕೃತಿಯ ಪರಿಸರದಲ್ಲಿ ಹುಟ್ಟಿದ ಮತ್ತು ಬದುಕಿದ ಮಾನವನನ್ನು, ಅವನ

ಜೀವನವನ್ನು ಆ ಸಂಸ್ಕೃತಿಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವಾಗಿದೆ. ಆ ನಿರ್ದಿಷ್ಟ ಸಂಸ್ಕೃತಿಯ ನೆಲೆಗಟ್ಟಿನಲ್ಲಿಯೇ ಅವನ ಬದುಕನ್ನು ಪರಿಶೀಲಿಸಬೇಕಾಗುತ್ತದೆ.

ಸಂಸ್ಕೃತಿ ಎಂಬುದು ಮಾನವನ ಸೃಷ್ಟಿ ಎನ್ನುವ ಮಾನವ ಶಾಸ್ತ್ರವು ಮಾನವನಿಗೆ ಸಂಬಂಧಿಸಿದ ಸಮಗ್ರ ಸಂಗತಿಗಳೇ ಸಂಸ್ಕೃತಿಯೆಂದು ಸ್ಪಷ್ಟಪಡಿಸುತ್ತದೆ. ಸಮಾಜದ ಜೀವನದಲ್ಲಿ ರೂಢಿಸಿಕೊಂಡ ಮತ್ತು ಗಳಿಸಿದ ವಿಚಾರಗಳು ಸಂಸ್ಕೃತಿಯಾಗುತ್ತದೆ. ಮಾನವನು ಸನ್ನಿವೇಶ ಮತ್ತು ಪರಿಸರದೊಂದಿಗೆ ಸಮನ್ವಯತೆಯನ್ನು ಸಾಧಿಸಿಕೊಂಡು ಭೌತ ಮತ್ತು ಭೌದ್ಧಿಕ ಪರಿಕರಗಳ ಸಂಯೋಜನೆಯಿಂದ ತಮ್ಮ ದೈಹಿಕ ಆಸೆ–ಆಕಾಂಕ್ಷೆಗಳನ್ನು ಪೂರೈಸಿಕೊಂಡು ಸಾಮಾಜಿಕ ಬದುಕಿನಲ್ಲಿ ರೂಡಿಸಿಕೊಳ್ಳುವ ಮಾನವನ ನಡವಳಿಕೆಗಳು ಮತ್ತು ಸಮಗ್ರ ವಿಚಾರಗಳು ಸಂಸ್ಕೃತಿ ಎನಿಸಿಕೊಳುತ್ತದೆ. ನಿರ್ಸಗದ ಸನ್ನಿವೇಶ ಮತ್ತು ಪ್ರಕೃತಿದತ್ತವಾದ ಅಂಶಗಳ ಹಿನ್ನೆಲೆಯಲ್ಲಿ ಕಾಲಾತೀತವಾಗಿ ಮಾನವನಲ್ಲಿ ಕಂಡು ಬರುವ ಪ್ರತಿಯೊಂದು ನಡವಳಿಕೆಯು ಸಂಸ್ಕೃತಿಯ ವಿಚಾರಗಳಾಗಿವೆ. ಮಾನವ ಶಾಸ್ತ್ರವು ಮಾನವನನ್ನೇ ಸಂಸ್ಕೃತಿಯ ಕೇಂದ್ರಬಿಂದುವಾಗಿ ಸ್ವೀಕರಿಸುತ್ತದೆ ಅಂತೆಯೇ ಮಾನವನ ಸಾಂಸ್ಕೃತಿಕ ವಿಚಾರಗಳನ್ನು ಮತ್ತು ಸಾಂಸ್ಥಿಕ ಬದುಕನ್ನು ಈ ಶಾಸ್ತ್ರವು ಅಭ್ಯಾಸ ಮಾಡುತ್ತದೆ.

೬.೪ ಭಾರತೀಯ ಸಮಾಜದ ಮೇಲೆ ಪ್ರಭಾವ ಭೀರಿರುವ ವಿದೇಶಿ ಸಾಂಸ್ಕೃತಿಕ ಘಟಕಗಳು

- **ಆರ್ಥಿಕ ವ್ಯವಸ್ಥೆ**

ಮಾನವನ ಆರ್ಥಿಕ ವ್ಯವಸ್ಥೆಯ ವಿಚಾರಗಳ ಹಿನ್ನಲೆಯಲ್ಲಿ ಸಾಂಸ್ಕೃತಿಕ ಮಾನವ ವಿಜ್ಞಾನವು ಸಂಸ್ಕೃತಿಯನ್ನು ಪರಿಚಯಿಸುತ್ತದೆ. ಮಾನವನು ಮತ್ತು ಮಾನವ ಸಮೂಹದಿಂದ ಉತ್ಪಾದನೆಯು ಸಮಾಜ, ವ್ಯಕ್ತಿಗತ ಹಾಗೂ ಸಾಮೂಹಿಕ ಎಂಬ ವಿವಿಧ ರೀತಿಯ ಸಂಪತ್ತು ಮತ್ತು ಆಸ್ತಿಗಳ ಪರಿಕಲ್ಪನೆ ಇರುತ್ತದೆ. ಮೌಲ್ಯ ಆರೋಪಿತವಾದ ಆಸ್ತಿಗೆ ಒಡೆತನವನ್ನು ಕಾಣಬಹುದು. ಮೌಲ್ಯ ಎಂದು ಪರಿಗಣಿತವಾದುದು ಸಾಮಾಜಿಕ ಬದುಕಿನಲ್ಲಿ ಕೊಡುಕೊಳ್ಳುವ ಸಂದರ್ಭದಲ್ಲಿ ವಿನಿಮಯ ಮಾಧ್ಯಮವಾಗಿ ಬಳಸಲ್ಪಡುತ್ತದೆ. ವ್ಯಕ್ತಿ ಮತ್ತು ಸಮಾಜದಲ್ಲಿ ಉತ್ಪಾದನೆಯ ವಿಚಾರವನ್ನು, ಅನುಭೊಗದ ಅಂಶವನ್ನು, ವಿತರಣೆಯನ್ನು ಮತ್ತು ವಿನಿಮಯ ರೂಪಗಳನ್ನು ಗುರುತಿಸಬಹುದು. ಕೃಷಿಯಿಂದ ತೊಡಗಿ ಆಧುನಿಕ ಕಾರ್ಖಾನೆಗಳವರೆಗೆ ವಿವಿಧ ರೀತಿಯ ಉತ್ಪಾದನೆಯನ್ನು ಕಾಣುವಂತೆಯೇ ಈ ಹಿನ್ನಲೆಯಲ್ಲಿಯೇ ಉಪಯೋಗಿಸಲ್ಪಡುವ ಮಾನವ ಕ್ರಮ ಅಥವಾ ದುಡಿಮೆಯು ಮೌಲ್ಯರೂಪಕ್ಕೆ ಪರಿವರ್ತಿತವಾಗಿ ವಿತರಣೆಯಾಗುವುದನ್ನು ಕಾಣಬಹುದು. ಪ್ರಾಥಮಿಕ ಅಗತ್ಯಕ್ಕಾಗಿಯೂ ಮತ್ತು ವೈಭೋಗದ ಜೀವನಕ್ಕಾಗಿಯೂ ಮೌಲ್ಯರೂಪದ ವಿನಿಮಯವಿರುತ್ತದೆ. ಹಣದ ಹಿಂದಿನ ವಿವಿಧ ರೂಪಗಳಾದ ರೂಪಾಯಿ, ಡಾಲರ್, ಪಾಂಡೆ, ಫ್ರಾಂಕ್, ರೂಬಲ್, ದಿನಾರ್ ಇವೇ ಮೊದಲಾದವುಗಳು ವಿವಿಧ ದೇಶಗಳ ಮೌಲ್ಯರೂಪಿತವಾದ ವಿನಿಮಯ ಮಾಧ್ಯಮವಾಗಿವೆ.

- **ಸಾಮಾಜಿಕ ವ್ಯವಸ್ಥೆ:**

ಸಮಾಜ ಜೀವಿಯಾದ ಮಾನವನ ವೈಯುಕ್ತಿಕ ಮತ್ತು ಸಾಮಾಜಿಕ ಬದುಕಿನ ವಿವಿಧ ಅಂಶಗಳನ್ನು ಸಾಂಸ್ಕೃತಿಕ ಮಾನವ ವಿಜ್ಞಾನದ ಮೂಲ ಘಟಕವಾದ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪರಿಶೀಲಿಸಬಹುದಾಗಿದೆ. ಮಾನವನ ವ್ಯಕ್ತಿಗತವಾದ ಜೀವನ, ವಯೋಮಾನ, ತಲೆಮಾರುಗಳು ಮತ್ತು ಜೀವನ ಚಕ್ರವು ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ರೀತಿಯನ್ನು ವಿವರವಾಗಿ ಪರಿಚಯಿಸಿಕೊಳ್ಳಬಹುದು. ಸ್ತ್ರೀ ಪುರುಷರ ಸ್ಥಾನಮಾನವನ್ನು ತಿಳಿಯಬಹುದಲ್ಲದೆ ಲಿಂಗಬೇಧಗಳು ಸಾಮಾಜಿಕ ರಚನೆಯನ್ನು ಏರ್ಪಡಿಸಿಕೊಂಡಿರುವ ರೀತಿಯನ್ನು ಈ ಹಿನ್ನಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ, ಮಾನವನ ನಡವಳಿಕೆಯನ್ನು ಮತ್ತು ಕೌಟುಂಬಿಕ ಸಂಬಂಧಗಳ ರೀತಿಯನ್ನು ಹಾಗೂ ಈ ಸಂಬಂಧಗಳ ಪರಿಕಲ್ಪನೆಯನ್ನು ಅಭ್ಯಾಸ ಮಾಡಬಹುದಾಗಿದೆ. ವಿವಿಧ ಸಮಾಜಗಳಲ್ಲಿ ನಡೆಯುವ ವಿವಾಹ, ವಿವಾಹದ ಬಗೆಗಿನ ವಿವಿಧ ರೀತಿಯ ಸಂಪ್ರದಾಯಗಳು, ವೈವಾಹಿಕ ಸಂಬಂಧವೇರ್ಪಡುವ ಬಗೆ, ರಕ್ತ ಸಂಬಂಧಗಳ ಪರಿಶೀಲನೆ ಮತ್ತು ಸಾಮಾಜಿಕ ವ್ಯವಸ್ಥೆಯ ಮುಂದುವರಿಕೆಯ ಅಂಶಗಳು ಸಾಮಾಜಿಕ ವ್ಯವಸ್ಥೆಯ ವಿಚಾರಗಳಾಗಿವೆ. ಈ ಸಮಾಜದಲ್ಲಿ ಕಂಡುಬರುವ ವಿವಿಧ ಆಸಕ್ತಿಗಳ ಸಂಘ ಸಂಸ್ಥೆಗಳು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಆ ಸಮಾಜ ಕಾರ್ಯ ಚಟುವಟಿಕೆಗಳಲ್ಲಿ ಬಾಗಿಯಾಗುವ ರೀತಿಯನ್ನು ಪರಿಶೀಲಿಸಬಹುದು. ಮಾನವ ಸಮಾಜಗಳಲ್ಲಿ ವಿವಿಧ ರೀತಿಯಲ್ಲಿ ಶ್ರೇಣಿಕೃತವಾಗಿರುವ ವರ್ಗಗಳು, ಜಾತಿಗಳು ಅಸ್ತಿತ್ವದಲ್ಲಿರುವುದನ್ನು ಇದೇ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಸಾಮಾಜಿಕ ರಚನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು, ವ್ಯಕ್ತಿಗತವಾದ ಮತ್ತು ಸಾಮೂಹಿಕ ಆಡಳಿತ ವ್ಯವಸ್ಥೆಯ ಸಂಘಸಂಸ್ಥೆಗಳು ಸಾಮಾಜಿಕ ವ್ಯವಸ್ಥೆಯ ಅಂಶಗಳಾಗಿವೆ. ಕನ್ನಡ ಪ್ರವಾಸ ಸಾಹಿತ್ಯವು ಈ ನೆಲೆಗಟ್ಟಿನಲ್ಲಿ ನೀಡುವ ವಿವಿಧ ಸಮಾಜಗಳ ಸಾಮಾಜಿಕ ವ್ಯವಸ್ಥೆಯ ವಿಚಾರಗಳನ್ನು ಪರಿಶೀಸಲಾಗಿದೆ.

ಪ್ರವಾಸ ಸಾಹಿತ್ಯದ ಸಾಹಿತ್ಯಕ ಮೌಲ್ಯ

ಕನ್ನಡ ಸಾಹಿತ್ಯದಲ್ಲಿ ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕತೆ, ಜೀವನ ಚರಿತ್ರೆ, ಪತ್ರ ಸಾಹಿತ್ಯ, ಅಂಕಣ, ಅಣಕ, ವಿಡಂಬನೆ ಹೀಗೆ ಹಲವಾರು ಪ್ರಕಾರಗಳು ಬೆಳವಣಿಗೆ ಹೊಂದುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಈ ಪ್ರಕಾರಗಳು ಹೆಜ್ಜೆ ಮೂಡಿದ ಹಾದಿಗಳಾಗಿ ಸ್ವಂತಿಕೆಯನ್ನು ಮತ್ತು ಸ್ವತಂತ್ರವಾದ ಅಸ್ತಿತ್ವವನ್ನು ಈಗಾಗಲೇ ಗಳಿಸಿಕೊಂಡಿವೆ. ಸಾಹಿತ್ಯದ ಪ್ರತಿಯೊಂದು ಪ್ರಕಾರವೂ ನಿರ್ದಿಷ್ಟವಾದ ಉದ್ದೇಶಗಳಿಗೆ ಬದ್ಧವಾಗಿರುತ್ತದೆ. ಈ ಸಾಹಿತ್ಯಕ ಬದ್ಧತೆಯ ಚರ್ಚೆಯ ಜೊತೆಯಲ್ಲಿಯೇ ಸಾಹಿತ್ಯದ ಲಕ್ಷಣಗಳ ಜಿಜ್ಞಾಸೆಯೂ ನಡೆದಿದೆ. ಸಾಹಿತ್ಯ ಉಗಮದ ಹಿನ್ನೆಲೆಯ ಬಗೆಗೆ ಚರ್ಚಿಸುತ್ತಾ ಮಾಸ್ತಿಯವರು "ಸಾಹಿತ್ಯ ಸ್ವರೂಪತ: ಭಾವದ

ಅಭಿವ್ಯಂಜನ, ಸಾಹಿತ್ಯದ ಯಾವುದೇ ಕೃತಿಯ ಮೂಲದಲ್ಲಿ ಭಾವ ಹೊಂದಿರಬೇಕು. ಆ ಭಾವವನ್ನು ಅನುಭವಿಸಿರುವ ಸಾಹಿತಿ ಚೇತನ ಹೊಂದಿರಬೇಕು. ಇಂಥ ಚೇತನವೊಂದು ಭಾವವನ್ನು ಅನುಭವಿಸಿ ಅದನ್ನು ಪ್ರಕಟಿಸಲು ತೊಡಗಿದಾಗ ಸಾಹಿತ್ಯ ನಿರ್ಮಾಣವಾಗುತ್ತದೆ”[೧೨೭] (ಹಾ.ಮಾ. ನಾಯಕ: ೧೯೮೪; ೨೧) ಎಂಬ ಅಭಿಪ್ರಾಯ ಉಲ್ಲೇಖಾರ್ಹವಾದುದು. ಕನ್ನಡ ಭಾಷೆಯು ಸಾಹಿತ್ಯಕ ಸ್ವರೂಪ ಪಡೆದಂದಿನಿಂದ ಇಂದಿನವರೆಗೂ ಬೆಳೆದು ಬಂದಿರುವ ಪರಿಯನ್ನು ಅಧ್ಯಯನಕ್ಕೊಳಪಡಿಸಿ ಆಯಾಯ ಕವಲುಗಳಲ್ಲಿ ಮತ್ತು ಪಥದಲ್ಲಿ ಕಾಣುವ ಸಾಹಿತ್ಯಕ ಮೌಲ್ಯವನ್ನು ಹಲವರು ಜಿಜ್ಞಾಸಕರು ಮತ್ತು ಶೋಧನಾರ್ಥಿಗಳು ವಿವಿಧ ರೀತಿಯಲ್ಲಿ ಅರ್ಥೈಸಿರುವುದನ್ನು ಕಾಣಬಹುದು. ಮೌಲ್ಯಭರಿತ ಸಾಹಿತ್ಯವೆನಿಸಿಕೊಳ್ಳಲು ಅನಿವಾರ್ಯವಾದ ಅಗತ್ಯ ಮತ್ತು ಅರ್ಹತೆಯ ಲಕ್ಷಣಗಳನ್ನು ಗೋಪಾಲಕೃಷ್ಣ ಅಡಿಗರು ವಿಶದೀಕರಿಸುತ್ತಾ “ಗದ್ಯದಲ್ಲಾಗಲೀ ಪದ್ಯದಲ್ಲಾಗಲೀ ಅದು ಸಾಹಿತ್ಯ ಎನ್ನಿಸಬೇಕಾದರೆ ಅಲ್ಲಿ ಭಾಷೆ ಕೇವಲ ಮಾಧ್ಯಮ ಅಥವಾ ಮನಸ್ಸಿನಲ್ಲಿರುವುದನ್ನು ಹೊರಕ್ಕೆ ತರುವ ವಾಹನ ಮಾತ್ರವಲ್ಲ. ಕಲೆಗಾರನ ವೈಯಕ್ತಿಕ ಅನುಭವದ ಪ್ರತಿರೂಪ, ದೇಹ. ಸಾಹಿತ್ಯದಲ್ಲಿ ಭಾವ ಮತ್ತು ಅದರ ರೂಪ ಅಭಿನ್ನ, ಅದೇ ಸಾಹಿತ್ಯದ ಮೂಲ ಲಕ್ಷಣ”[೧೨೮] (ಸಿ.ಪಿ. ಕೃಷ್ಣಕುಮಾರ್: ೧೯೮೩; ೯೪) ಎಂಬ ಪರಿಕಲ್ಪನೆಯು ಅರ್ಥಪೂರ್ಣವಾದುದು ಮತ್ತು ಪರಿಗ್ರಾಹ್ಯವಾದುದು ಆಗಿದೆ. ಈ ಅಭಿಪ್ರಾಯಗಳು ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳ ಗ್ರಹಿಕೆಗೆ ಸಹಕಾರಿಯಾಗುವಂತಹವು.

ಸಾಹಿತ್ಯ ಕ್ಷೇತ್ರದೊಂದಿಗೆ ಬರಹಗಾರನು ಸಾಧಿಸಿಕೊಂಡಿರುವ ಅನನ್ಯತೆ ಮತ್ತು ತಾದಾತ್ಮ್ಯತೆ; ಅಲ್ಲದೆ ಸಾಹಿತ್ಯ ಕೃಷಿಯ ಸಾನ್ನಿಧ್ಯ ಹಾಗೂ ತಲ್ಲೀನತೆಯಲ್ಲಿರುವ ನಿರಂತರತೆಯು ಉತ್ತಮ ಸಾಹಿತ್ಯವನ್ನು ಸೃಷ್ಟಿಸಲು ಪೋಷಕವಾಗುತ್ತದೆ. ಭಾಷೆಯ ಬಳಕೆಯಲ್ಲಿನ ವಿಶಿಷ್ಟತೆ ಮತ್ತು ದುಡಿಸಿಕೊಳ್ಳುವ ತಂತ್ರ ಹಾಗೂ ವಿಪುಲವಾದ ಶಬ್ದ ಸಂಪತ್ತು ಅಭಿವ್ಯಕ್ತಿಯಲ್ಲಿ ಸಾರ್ಥಕವಾಗುತ್ತದೆ. ಲೇಖಕನ ಸಮೃದ್ಧ ಅನುಭವವೂ ಮೂಲ ಸರಕಾಗಿ ಸೃಜನಶೀಲ ಕೃತಿ ಮೂರ್ತೀಭವಿಸುತ್ತದೆ. ಸಾಹಿತ್ಯ ರಚನೆಯಲ್ಲಿ ತಮ್ಮತನವನ್ನು ಉಳಿಸಿಕೊಳ್ಳುವ ಮತ್ತು ಸ್ವಂತಿಕೆಯನ್ನು ಛಾಪಿಸಿಕೊಳ್ಳುವ ಹಿರಿಮೆಯನ್ನು ಹೊಂದಿರುವ ಸಾಹಿತ್ಯದ ವಿವಿಧ ಸ್ವರೂಪಗಳಲ್ಲಿ ಸಾಹಿತ್ಯಾಂಶಗಳು ದಟ್ಟವಾಗಿರುತ್ತವೆ. ಕಾದಂಬರಿ ತಂತ್ರದ ಪ್ರಯೋಗಶೀಲತೆಯ ವಿಚಾರವಾಗಿ ಕೀರ್ತಿನಾಥ ಕುರ್ತಕೋಟಿಯವರು ಜಿಜ್ಞಾಸೆ ನಡೆಸುತ್ತಾ; ಸಾರ್ಥಕ ಕೃತಿ ಸೃಷ್ಟಿಯ ಅನಿವಾರ್ಯ ಅಗತ್ಯವನ್ನು; “ಒಂದು ಸಾಹಿತ್ಯ ಪ್ರಕಾರವನ್ನು ಅಭಿವ್ಯಕ್ತಿಯ ಸಹಜ ಮಾಧ್ಯಮವನ್ನಾಗಿ ಸ್ವೀಕರಿಸಿ, ಅದರ ನಿಯಮಗಳಿಗೆ ವಸ್ತುವನ್ನು ಒಳಪಡಿಸಿ, ಅವುಗಳ ಮೂಲಕವೇ ಅರ್ಥಪೂರ್ಣತೆಯನ್ನು ಪಡೆಯುವ ಕೃಷಿಕಾರ್ಯ ಕನ್ನಡದಲ್ಲಿ ತೀರ ಅಪರೂಪವೆಂದೇ ಹೇಳಬೇಕು. ಸಾಹಿತ್ಯದ ತಂತ್ರ ವಿಶೇಷಗಳು ಲೇಖಕನ ಶಕ್ತಿಗೆ ಆಹ್ವಾನವಾಗಿದ್ದು ಅವನು ಕಷ್ಟದಿಂದ ಅವುಗಳನ್ನು ಜೀರ್ಣಿಸಿಕೊಂಡರೆ ಮಾತ್ರ ಸಶಕ್ತವಾದ ಕೃತಿ ನಿರ್ಮಾಣ ಸಾಧ್ಯವಾಗುತ್ತದೆ”[೧೨೯] (ಹಾ.ಮಾ. ನಾಯಕ: ೧೯೮೪; ೧೪೯) ಎಂದು ವ್ಯಾಖ್ಯಾನಿಸುವುದನ್ನು ಪ್ರವಾಸ ಸಾಹಿತ್ಯ ಪ್ರಕಾರಕ್ಕೂ ಅನ್ವಯಿಸಿಕೊಳ್ಳಬಹುದು. ಸಾಹಿತ್ಯಕವಾಗಿ

ಶ್ರೀಮಂತವಾಗದ ಯಾವುದೇ ಪ್ರಕಾರದ ಬರವಣಿಗೆಯು ಗಮನಾರ್ಹ ಕೊಡುಗೆಯಾಗದು. ಅಲ್ಲದೆ ಅಂತಹ ರಚನೆಗಳು ಯಾವುದೇ ಭಾಷೆಯ ಸಾಹಿತ್ಯ ರಂಗವನ್ನು ಸಂಪದ್ಭರಿತವಾಗಿ ಮಾಡುವಲ್ಲಿ ವಿಫಲವಾಗುವವು. ಸಾಹಿತ್ಯಕ ಅಂಶವೆಂಬುದು ಸಾಹಿತ್ಯ ಸೃಷ್ಟಿಯ ಪ್ರಾಥಮಿಕ ಅರ್ಹತೆಯೂ, ಮಾನದಂಡವೂ ಆಗುತ್ತದೆ. ಯಾವುದೇ ಸಾಹಿತ್ಯ ರಚನೆಯಲ್ಲಿ ಲೇಖಕನ ಮೂಲಾಕಾಂಕ್ಷೆಯ ಈಡೇರಿಕೆಯಷ್ಟೇ ಉತ್ತಮ ಸಾಹಿತ್ಯದ ಲಕ್ಷಣಗಳಾಗದೆ; ಕೃತಿಯಲ್ಲಿ ಕಂಡುಬರುವ ಸೃಜನಶೀಲತೆ ಮತ್ತು ಸಾರ್ವಕಾಲಿಕ ಮೌಲ್ಯಗಳು ಪ್ರಮುಖವಾಗಿರುತ್ತವೆ.

- **ಸಮಾರೋಪ**

ಹತ್ತು ಹಲವು ಕಾರಣಗಳಿಂದಾಗಿ ಮನುಷ್ಯ ಪ್ರಾಣಿಗಳಿಗಿಂತ ಭಿನ್ನವಾಗಿ ನಿಲ್ಲುತ್ತಾನೆ. ಅನುಕರಿಸುವ, ಅನುಸರಿಸುವ, ಆಲೋಚಿಸುವ ಶಕ್ತಿ ಪ್ರಕೃತಿ ಅವನಿಗೆ ಕೊಟ್ಟ ವರ. ಆಹಾರಕ್ಕಾಗಿ, ವಸತಿಗಾಗಿ, ಅಲೆದಾಡಲು ಆರಂಭಿಸಿದಾಗಲೇ ಅವನ ಪ್ರಯಾಣ ಆರಂಭವಾಯಿತೆನ್ನಬಹುದು. ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ನೆಲೆಸಿದ ಮಾನವ, ಕುತೂಹಲದಿಂದಲೋ ವ್ಯಾಪಾರದ ದೃಷ್ಟಿಯಿಂದಲೋ, ಮನರಂಜನೆಯ ಕಾರಣಕ್ಕಾಗಿಯೋ ಧಾರ್ಮಿಕ ಸ್ಥಳಗಳ ವೀಕ್ಷಣೆಗಾಗಿಯೋ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣಿಸಿದ ಪರಿಣಾಮದಿಂದಲೇ ಪ್ರವಾಸ ಆರಂಭವಾಯಿತು. ಪ್ರವಾಸ ಎಂದರೆ ಒಂದು ಕಡೆ ನೆಲೆ ನಿಲ್ಲದೆ ತಾನು ಇರುವ ಜಾಗವನ್ನು ಬಿಟ್ಟು ಬೇರೆ ಪ್ರದೇಶಕ್ಕೆ ಹೋಗಿ ಬರುವಂತದ್ದಾಗಿದೆ. ಹೀಗೆ ಹೋದಾಗ ಆಗುವ ಅನುಭವಗಳು ಅಪರಿಮಿತವಾದವು. ಅಂತಹ ಅನುಭವಗಳು ಪ್ರವಾಸ ಕಥನಗಳಲ್ಲಿ ದಾಖಲಾಗಲು ಪ್ರಾರಂಭವಾದವು. ಹಿಂದಿನ ಕಾಲದಲ್ಲಿ ಪ್ರವಾಸ ಹಾಗೂ ಪ್ರವಾಸದ ಅನುಭವಗಳ ಬರವಣಿಗೆಯಲ್ಲಿ ಬಹುಪಾಲು ಪುರುಷರದ್ದೇ ಪಾತ್ರವಿತ್ತು ತದನಂತರ ಆಧುನಿಕ ಅನುಕೂಲಗಳು ಹೆಚ್ಚಿದಂತೆ ಮಹಿಳಾ ಪ್ರವಾಸಿಗಳು ಮತ್ತು ಮಹಿಳಾ ಪ್ರವಾಸ ಸಾಹಿತ್ಯ ಆರಂಭವಾಯಿತು.

ಪ್ರಾಚೀನ ಭಾರತದಲ್ಲಿ ಪ್ರವಾಸವೆಂದರೆ ತೀರ್ಥಯಾತ್ರೆ, ಕೇವಲ ಮೋಕ್ಷಕ್ಕಾಗಿ, ಪುಣ್ಯ ಪ್ರಾಪ್ತಿಗೆ ಎಂಬ ಸೀಮಿತ ಅರ್ಥದಲ್ಲಿತ್ತು. ಅಂದರೆ ಇಂದು ಪ್ರವಾಸವು ಅದರಾಚೆಗಿನ ಅರ್ಥ ಪಡೆದಿದೆ. ಪ್ರವಾಸವು ವಿಭಿನ್ನ ಅನುಭವಗಳನ್ನು, ವೀಕ್ಷಣೆಯನ್ನು, ಮನರಂಜನೆಯನ್ನು ಒಳಗೊಂಡಿರುತ್ತದೆ. ಪ್ರವಾಸಿಗಳು ಆಯಾದೇಶ–ರಾಷ್ಟ್ರದ ಸಮಾಜಿಕ, ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನ ಮತ್ತು ನಿಸರ್ಗದ ವೈಶಿಷ್ಟ್ಯಗಳನ್ನು ತಮ್ಮದಾಗಿಸಿಕೊಂಡು ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಾರೆ. ಪ್ರವಾಸಗಳು ಪರಸ್ಥಳದಲ್ಲಿ ಮುಖಾಮುಖಿಯಾದ ಸಂಸ್ಕೃತಿ, ಪರಿಸರ ಮತ್ತು ಭೌತಿಕ ವಿಚಾರಗಳನ್ನು ಗ್ರಹಿಸಿ ದಾಖಲಿಸುವುದೇ ಪ್ರವಾಸ ಸಾಹಿತ್ಯ. ಈ ಹಿನ್ನೆಲೆಯಲ್ಲಿ ಭಾರತದ ಭೌಗೋಳಿಕ ವ್ಯಾಪ್ತಿಯ ಪ್ರವಾಸ ಕಥನಗಳು ಮಹತ್ವವಾಗಿದೆ. ಈ ಅಧ್ಯಯನದಲ್ಲಿ ಪ್ರವಾಸದ ಅರ್ಥ, ಉದ್ದೇಶ ಮತ್ತು ವ್ಯಾಪ್ತಿಯನ್ನು ಅರಿಯುವುದರ ಜೊತೆಗೆ ಭಾರತೀಯ ಭಾಷೆಗಳಲ್ಲಿ ಪ್ರವಾಸ ಸಾಹಿತ್ಯ ಎಂಬ ಸಾಹಿತ್ಯ ಪ್ರಕಾರ ಬೆಳೆದು ಬಂದ ಹಿನ್ನೆಲೆಯನ್ನು ತಿಳಿಯಬಹುದಾಗಿದೆ. ಇಲ್ಲಿ ಮುಖ್ಯ ಉದ್ದೇಶ ಭಾರತದಲ್ಲಿ ಪ್ರವಾಸ ಕೈಗೊಂಡು ವಿವಿಧ ರಾಜ್ಯಗಳ ವಿಭಿನ್ನ ಸಂಸ್ಕೃತಿ, ಸಾಮಾಜಿಕ ಅಂಶಗಳು, ರಾಜಕೀಯ ಮತ್ತಿತರ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು

ದಾಖಲಾಗಿರುವ ಪ್ರವಾಸಕಥನಗಳ ಆಧಾರದಲ್ಲಿ ಕ್ರಿ.ಪೂದಲ್ಲಿ ವಿದೇಶಿಯರಿಂದ ಆರಂಭಗೊಂಡು ಪ್ರಸ್ತುತದವರೆಗಿನ ಪ್ರವಾಸಿಗಳ ಬರಹಗಳ ಹಿನ್ನೆಲೆಯಲ್ಲಿ ವೈವಿಧ್ಯಮಯ ಸಂಸ್ಕೃತಿಯನ್ನು ಒಳಗೊಂಡಿರುವ ನಮ್ಮ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

ಅಧ್ಯಯನದ ಫಲಿತಗಳು

ಭಾರತದ ಭೌಗೋಳಿಕ ವ್ಯಾಪ್ತಿಯಲ್ಲಿ ಕನ್ನಡ ಪ್ರವಾಸ ಸಾಹಿತ್ಯವನನ್ನು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ, ಐತಿಹಾಸಿಕ, ಭೌಗೋಳಿಕ ಮತ್ತು ಪ್ರಾಕೃತಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದಾಗ ಗುರುತರವಾದ ಅಂಶಗಳು ಕಂಡು ಬಂದಿದ್ದು ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ಒಟ್ಟು ಫಲಿತಗಳನ್ನು ಹೀಗೆ ಗುರುತಿಸಲಾಗಿದೆ.

- ವಿವಿಧ ಪ್ರದೇಶದ ಮನುಷ್ಯ ಮನುಷ್ಯರ ನಡುವಿನ ಶೋಷಣೆಯ ಭಿನ್ನ ಆಯಾಮಗಳನ್ನು ಪ್ರವಾಸ ಕಥನಗಳು ತೆರೆದಿಡುತ್ತವೆ.
- ಪ್ರವೇಶ ತಡವಾದರೂ ಪ್ರವಾಸ ಮತ್ತು ಪ್ರವಾಸ ಸಾಹಿತ್ಯ ರಚನೆಯಲ್ಲಿ ಪುರುಷರಷ್ಟೇ ಮಹತ್ತರ ಪಾತ್ರ ಮಹಿಳೆ ವಹಿಸಿರುವುದನ್ನು ಗುರುತಿಸಲಾಗಿದೆ,
- ಪ್ರವಾಸಿಗಿರಬೇಕಾದ ಉತ್ತಮ ಗ್ರಹಿಕೆಯ ದೃಷ್ಟಿಕೋನದ ನಿಲುವನ್ನು ನೀಡುತ್ತದೆ.
- ವಿವಿಧ ರಾಜ್ಯಗಳಲ್ಲಿ ಆಯಾ ಪ್ರದೇಶದ ಸ್ಥಳೀಯ ಭಾಷೆಗಳಿಗೆ ಪ್ರಾಧಾನ್ಯತೆ ನೀಡಿರುವುದನ್ನು ಗುರುತಿಸಿದೆ.
- ಪ್ರವಾಸ ಸಾಹಿತ್ಯದಲ್ಲಿ ಗುರುತಿಸಲಾದ ಆದಿಮ ಜನಾಂಗ, ಆದಿವಾಸಿ ಮತ್ತು ಬುಡಕಟ್ಟುಗಳ ಸಂಸ್ಕೃತಿಯ ಬಗೆಗಿನ ಮಾಹಿತಿ ನೀಡುವಲ್ಲಿ ಆಸಕ್ತಿ ತೋರುತ್ತಾ ಜನಪದ ಸಂಸ್ಕೃತಿಯ ಅಪ್ಪಟ ಮೆರುಗಿನ ಜೀವನ ಕ್ರಮದ ಒಳನೋಟಗಳನ್ನು ಎತ್ತಿ ಹಿಡಿದಿದೆ.
- ಪ್ರವಾಸ ಸಾಹಿತ್ಯದಲ್ಲಿ ದಾಖಲಿಸಿದ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕ ಸ್ತ್ರೀಪರವಾದ ಕಾಳಜಿಗಳನ್ನು ಗುರುತಿಸುತ್ತಾ, ಬೇರೆ ಬೇರೆ ಪ್ರದೇಶಗಳಲ್ಲಿನ ಮಹಿಳೆಯರ ಬಗೆಗಿನ ಪ್ರಾತಿನಿಧ್ಯತೆ, ಸ್ತ್ರೀಯರ ಸ್ಥಾನಮಾನಗಳನ್ನು ಕುರಿತಾದ ಕಾಳಜಿಯನ್ನು ಎತ್ತಿಹಿಡಿದಿದೆ.

- ಪ್ರವಾಸೋಧ್ಯಮವು ಬೆಳೆದು ಬಂದ ರೀತಿ ಮತ್ತು ಅದರ ಸ್ಥಿತ್ಯಂತರಗಳನ್ನು ಗುರುತಿಸಿದೆ. ಜಾಗತೀಕರಣದ ಫಲವಾಗಿ ಮತ್ತು ಪ್ರವಾಸೋದ್ಯಮವು ಬೆಳೆದಂತೆಲ್ಲ ಬೇರೆ ಬೇರೆ ದೂರದೂರದ ಪ್ರದೇಶಗಳಿಗೆ ಪ್ರವಾಸಿಗಳ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಿದೆ.

- 'ದೇಶ ನೋಡು–ಕೋಶ ಓದು' ಎಂಬ ಗಾದೆಯ 'ಜ್ಞಾನ ಮತ್ತು ದೇಶ ಪರ್ಯಟನೆ' ಎಷ್ಟು ಮುಖ್ಯವೆಂದು ಬಿಂಬಿಸಿದೆ.

- ಮಹಿಳೆಯರ ಸ್ಥಾನಮಾನ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ, ಉಡುಗೆ–ತೊಡುಗೆ, ಪ್ರತಿಭಟನೆ ಮತ್ತು ಸಾಮಾಜಿಕ ಮೌಲ್ಯಗಳಂತಹ ಅಂಶಗಳನ್ನು ಮನಗಾಣಬಹುದು.

- ಪ್ರವಾಸ ಕಥನಗಳಲ್ಲಿ ಪ್ರಕೃತಿ ಮತ್ತು ಮನುಷ್ಯ ಸಂಬಂಧದ ಮಹತ್ವವನ್ನು ಕಾಣಬಹುದಾಗಿದೆ. ಆಯಾ ಪ್ರದೇಶದ ಶ್ರೀಮಂತಿಕೆ ಅಲ್ಲಿ ಪ್ರಾಕೃತಿಕ ಪರಿಸರ ಮುಖ್ಯವಾಗಿರುವುದನ್ನು ನಿರೂಪಿಸುತ್ತದೆ.

- ನೈಸರ್ಗಿಕ ಮತ್ತು ಮಾನವ ನಿರ್ಮಿತ ಸ್ಮಾರಕ, ಕಟ್ಟಡ, ಅರಮನೆಗಳ ಇತಿಹಾಸ, ಪುರಾಣ ಮತ್ತು ಆಧುನಿಕತೆಯ ಅಂಶಗಳನ್ನು ವಿವರಿಸುತ್ತದೆ.

- ಪ್ರವಾಸ ಕೈಗೊಳ್ಳುವ ಮುನ್ನ ಮಾಡಿಕೊಳ್ಳಬೇಕಾದ ಸಿದ್ಧತೆಗಳು, ಜವಾಬ್ದಾರಿಗಳ, ಎಚ್ಚರಿಕೆ, ಅನುಕೂಲ ಹಾಗೂ ಅನಾನುಕೂಲಗಳನ್ನು ಪ್ರವಾಸ ಕಥನಗಳು ತೆರೆದಿಡುತ್ತವೆ.

- ಆಧುನಿಕ, ಇತಿಹಾಸ, ಪುರಾಣ, ಧಾರ್ಮಿಕ, ಪ್ರಾಕೃತಿಕ ಸೌಂದರ್ಯ, ಶೈಕ್ಷಣಿಕ, ಭೌಗೋಳಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಘರ್ಷದ ವಿವಿಧ ನೆಲೆಗಳ ಸ್ಪಷ್ಟವಾದ ಚಿತ್ರಣ ಕಂಡುಬರುತ್ತದೆ.

- ಭಾರತದಂತಹ ಮುಂದುವರೆಯುತ್ತಿರುವ ರಾಷ್ಟ್ರವು ವಿಜ್ಞಾನ ತಂತ್ರಜ್ಞಾನದಲ್ಲಿ ಪ್ರಗತಿಯನ್ನು ಸಾಧಿಸಿರುವುದನ್ನು ಗಮನಿಸುತ್ತಾ ಇತರ ರಾಷ್ಟ್ರಗಳೊಂದಿಗೆ ಸ್ಪರ್ಧಿಸುವ ಸಾಮರ್ಥ್ಯವಿದೆಯೆಂಬುದನ್ನು ಗ್ರಹಿಸಿದೆ.

ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು:

ಪರಾಮರ್ಶನ ಗ್ರಂಥಗಳು:

೧. ೧, ಸಂ. ಮಲ್ಲೇಪುರಂ ಜಿ. ವೆಂಕಟೇಶ – ಪ್ರವಾಸ ಸಾಹಿತ್ಯದ ಒಂದು ಅಧ್ಯಯನ, ಹೊನ್ನ ಪ್ರಕಾಶನ, ಬೆಂಗಳೂರು, ೧೯೯೨.

೨. ನಾಗೇಗೌಡ.ಎಚ್.ಎಲ್. – ಪ್ರವಾಸಿ ಕಂಡ ಇಂಡಿಯಾ, ಸಂಪುಟಗಳು, ಪ್ರಸಾರಾಂಗ, ಮೈಸೂರು

೩. ವಿಶ್ವವಿದ್ಯಾನಿಲಯ, ೧೯೬೪.

೪. ಶೇಷಗಿರಿರಾವ್.ಎಲ್.ಎಸ್. – ಹೊಸ ಕನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ,

೫. ಬೆಂಗಳೂರು, ೧೯೯೯.

೬. ೪. ತಾರಾನಾಥ ಎನ್.ಎಸ್. – ಪ್ರವಾಸ ಸಾಹಿತ್ಯ, ಶಕ್ತಿ ಪ್ರಕಾಶನ, ಗೋಕುಲಂ, ಮೈಸೂರು, ೧೯೯೦.

೭. ೫. ವಸಿಷ್ಟ– ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶನ ಚೇತನ ಬುಕ್ ಹೌಸ್, ಮೈಸೂರು, ೧೯೯೭.

೮. ೬. ವಿದ್ಯಾಶಂಕರ ಎಸ್. – ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಪ್ರಿಯದರ್ಶಿನಿ

೯. ಪ್ರಕಾಶನ, ಮೈಸೂರು, ೧೯೯೧.

೧೦. ಅನುರಾಧ ಬಿ.ಟಿ. – ಪ್ರವಾಸ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಸಂಶೋಧನಾ ಮಹಾ

೧೧.ಪ್ರಬಂಧ, ಬೆಂಗಳೂರು ವಿಶ್ವವಿದ್ಯಾನಿಲಯ, ೨೦೦೯.

೧೨.ಆರ್ಮುಗಂ ಎಂ. – ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಒಂದು ಅಧ್ಯಯನ, ಸಂಶೋಧನಾ ಮಹಾ

೧೩.ಪ್ರಬಂಧ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, ೧೯೯೨

೧೪.ಲತಾ ಎಂ. ಗುತ್ತಿ ಪಾಟೀಲ – ಪ್ರವಾಸ ಸಾಹಿತ್ಯ: ಅನ್ಯ ಸಂಸ್ಕೃತಿಗಳ ಅಧ್ಯಯನ, ಕರ್ನಾಟಕ

೧೫. ವಿಶ್ವವಿದ್ಯಾನಿಲಯ, ಧಾರವಾಡ, ೨೦೦೫.

೧೬. ೪, ನಳಿನಿ – ಕನ್ನಡ ಸಾಹಿತಿಗಳ ವಿದೇಶ ಪ್ರವಾಸ ಕಥನಗಳು, ತೌಲನಿಕ ಅಧ್ಯಯನ, ಬೆಂಗಳೂರು

೧೭. ವಿಶ್ವವಿದ್ಯಾನಿಲಯ, ೨೦೦೮.

೧೮. ಪೂರ್ಣಿಮಾ ಎಸ್. ಅಮೇರಿಕಾ ಪ್ರವಾಸ ಕಥನಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ

೧೯. ವಿಶ್ವವಿದ್ಯಾನಿಲಯ, ಹಂಪಿ, ೨೦೧೦.

ಲೇಖನಗಳು:

೧. ಆರ್ಮುಗಂ ಎಂ. – ಕನ್ನಡ ಪ್ರವಾಸ ಸಾಹಿತ್ಯ ಒಂದು ಸಮೀಕ್ಷೆ,

೨. ಆರ್ಮುಗಂ ಎಂ. – ಪ್ರವಾಸ ಸಾಹಿತ್ಯ ಅಧ್ಯಯನಗಳು: ಒಂದು ವಿಶ್ಲೇಷಣೆ, ಸಾರ್ಥಕ ಸಂ. ಹರ್ತಿಕಜೆ, ಕೃಷ್ಣಭಟ್ಟ, ಸೇಡಿಯಾಪು ಕೃಷ್ಣಭಟ್ಟರ ಅಭಿನಂದನ ಗ್ರಂಥ, ೨೦೦೨.

೩. ಆರ್ಮುಗಂ ಎಂ. – ಪ್ರವಾಸ ಸಾಹಿತ್ಯ ಬೆಳೆದು ಬಂದ ದಾರಿ, ಸಂಕ್ರಮಣ ಪತ್ರಿಕೆ, ೧೯೮೯, ೨೪ನೇ

ಸಂಪುಟ, ೧ನೇ ಸಂಚಿಕೆ,

೪, ಬಿದರಹಳ್ಳಿ ನರಸಿಂಹ ಮೂರ್ತಿ – ಡಾ। ಜಿ.ಎಸ್. ಶಿವರುದ್ರಪ್ಪನವರ ಪ್ರವಾಸ ಕಥನಗಳು, ಹಣತೆ, ಸಂ. ನಾಗಭೂಷಣ ಡಿ.ಎಸ್., ಜಿಎಸ್. ಶಿವರುದ್ರಪ್ಪರವರ ಅಭಿನಂದನ ಗ್ರಂಥ, ಲೋಹಿಯ

ಪ್ರಕಾಶನ, ಬೆಳ್ಳಾರಿ, ೨೦೦೧.

೫. ಬೋರ ಲಿಂಗಯ್ಯ ಹಿ.ಚಿ. – ಆತ್ಮಕಥನ ಜೀವನ ಚರಿತ್ರೆ ಮತ್ತು ಪ್ರವಾಸ ಸಾಹಿತ್ಯ, ಕನ್ನಡ ವಾರ್ಷಿಕ, ೧೯೯೨, ಸಂ. ಮಲ್ಲೇಪುರ ಜಿ. ವೆಂಕಟೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೬. ಬಾಳಿ ಮೀನಾಕ್ಷಿ – ಡಾ। ಅನುಪಮಾ ನಿರಂಜನರ ಪ್ರವಾಸ ಸಾಹಿತ್ಯ, ಅನುಪಮಾ ಅಭಿನಂದನ, ಸಂ. ಬೋಳಂತಕೋಡಿ ಈಶ್ವರ ಭಟ್ಟ, ಕರ್ನಾಟಕ ಸಂಘ, ಪುತ್ತೂರು, ೧೯೮೮,

೭. ಚಂದ್ರಶೇಖರ ಕಂಬಾರ – ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ ಸಂ. ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾನಿಲಯ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ೧೯೭೩.

೮. ಕೃಷ್ಣಕುಮಾರ್ ಸಿ.ಪಿ. – ಸಮುದ್ರದಾಚೆಯಿಂದ, ವಿನಾಯಕ ಒಂದು ಅಧ್ಯಯನ ಸಂ. ಶಿವರಾಮು ಕಾಡನಕುಪ್ಪೆ ಭಾರತಿ ಪ್ರಕಾಶನ, ಮೈಸೂರು, ೧೯೮೬,

೯, ಮರುಳಯ್ಯ ಸಾ.ಶಿ. ಪ್ರವಾಸ ಸಾಹಿತ್ಯ’, ಪ್ರಬುದ್ಧ ಕರ್ನಾಟಕ, ಬೆಳ್ಳಿ ಸಂಚಿಕೆ, ೧೯೬೩.

೧೦. ನಾಗರಾಜ ಎಂ– ಪ್ರವಾಸ ಸಾಹಿತ್ಯ, ದಶಕದ ಕನ್ನಡ ಸಾಹಿತ್ಯ (೧೯೯೧–೨೦೦೦) ಎಫ್.ಟಿ ಹಳ್ಳೀಕೇರಿ ಕೆ. ರವೀಂದ್ರನಾಥ.

೧೧. ಸಂ ಪ್ರಧಾನ್ ಗುರುದತ್ತ್– ಗೊರೂರು ರಾಮಸ್ವಾಮಿ ಅಯ್ಯಂಗಾರ್, ನವ ಕರ್ನಾಟಕ ಪ್ರಕಾಶನ, ಮೈಸೂರು, ೨೦೦೬.

೧೨. ಸಂತೋಷ್ ಕುಮಾರ್ ಗುಲ್ವಾಡಿ– ಪ್ರವಾಸ ಸಾಹಿತ್ಯ, ಸುವರ್ಣ ಮಹೋತ್ಸವದ ನೆನಪಿನ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ೧೯೭೦.

೧೩ ರಾಗೌ– ಸಮುದ್ರದಾಚೆಯಿಂದ, ವಿನಾಯಕ ಸಾಹಿತ್ಯ ವಿಚಾರ, ಸಂ.ಎಸ್. ಚೆನ್ನಪ್ಪ, ಅರ್ಕಾವತಿ ಪ್ರಕಾಶನ, ಮೈಸೂರು. ೧೯೮೭.

೧೪. ಸೀತಾ ಹನಸೋಗೆ– ಪ್ರವಾಸ ಮತ್ತು ಕ್ರೀಡೆ, ಮಹಿಳಾ ಸಾಹಿತ್ಯ ಸಮೀಕ್ಷೆ, ಸಂ ಶ್ರೀಮತಿ ಆರ್ಯಾಂಬ ಪಟ್ಟಾಭಿ, ಸಂವಹನ ಪ್ರಕಾಶನ, ಮೈಸೂರು, ೨೦೦೪.

೧೫. ವಿಜಯಶ್ರೀ ಕೆ.– ಸಮುರದಾಚೆಯಿಂದ, ವಿನಾಯಕ, ಬೆಂಗಳೂರು ವಿಶ್ವವಿದ್ಯಾನಿಲಯ, ಕಲಾ ಭಾರತಿ ಪ್ರಕಾಶನ, ಬೆಂಗಳೂರು.

೧೬. ವಿಜಯಾದಬ್ಬೆ– ಶತಮಾನದ ಪ್ರವಾಸ ಸಾಹಿತ್ಯ, ಶತಮಾನದ ಕನ್ನಡ ಸಾಹಿತ್ಯ, ಸಂ ಜಿ.ಹೆಚ್ ನಾಯಕ, ೨೦೦೯, ಉತ್ತರ ಕನ್ನಡ.

೧೭. ವಿದ್ಯಾಶಂಕರ ಎಸ್.– ಕನ್ನಡ ವಾರ್ಷಿಕ, ೧೯೯೧, ಸಂ. ಬಸವರಾಜು ಕಲ್ಗುಡಿ, ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೮. ವಿದ್ಯಾಶಂಕರ ಎಸ್– ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ, ೧೯೮೨, ಸಂ.ಜಿ.ಎಸ್ ಶಿವರುದ್ರಪ್ಪ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ.

೧೯. ವಿವೇಕ ರೈ ಬಿ.ಎ– ಕನ್ನಡ ಪ್ರವಾಸ ಸಾಹಿತ್ಯ, ಪ್ರಬುದ್ಧ ಕರ್ನಾಟಕ, ಸಂಪುಟ=೨೧, ಸಂಚಿಕೆ–೨, ೧೯೭೦.

೨೦. ವೀರಣ್ಣ ಸಿ,– ಪ್ರವಾಸ ಸಾಹಿತ್ಯ, ಸಾಹಿತ್ಯ ವಾರ್ಷಿಕ, ೧೯೭೧, ಸಂ.ಜಿ.ಎಸ್, ಶಿವರುದ್ರಪ್ಪ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ.